# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/ವಿಶೇಷ ಸಭೆ/2022-23

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ: 21-09-2022

**ಗೆ,**

***ಸಿಂಡಿಕೇಟ್ ಸದಸ್ಯರು,***
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು.

**ಮಾನ್ಯರೆ,**

**ವಿಷಯ:** ದಿನಾಂಕ 13-09-2022 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು.

***

ದಿನಾಂಕ 13-09-2022 ರಂದು ಬೆಳಗ್ಗೆ 11.00 ಗಂಟೆಗೆ ಬೋರ್ಡ್ ರೂಮ್, ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು-560 001, ಇಲ್ಲಿ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಮಾವಳಿ 5.16 ರನ್ವಯ ಕಳುಹಿಸಲಾಗಿದೆ.

ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ ಸದರಿ ಪರಿನಿಯಮಾವಳಿಯನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

**ಕುಲಸಚಿವರು**

ಲಗತ್ತು: ಮೇಲಿನಂತೆ.

ಕುಲಸಚಿವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ ಸಭೆಯನ್ನು ನಡೆಸಿಕೊಡಬೇಕೆಂದು ಕುಲಪತಿಗಳಲ್ಲಿ ಕೋರಿದರು.

ಕುಲಪತಿಗಳು ಸದಸ್ಯರೆಲ್ಲರಿಗೂ ಮತ್ತೊಮ್ಮೆ ಸ್ವಾಗತ ಕೋರಿ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು.

***Proceedings of the Special meeting of the Syndicate held on 13.09.2022***

**ವಿಷಯ ಸಂಖ್ಯೆ 01:** ವಿಶ್ವವಿದ್ಯಾಲಯದ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು (ಯು.ವಿ.ಸಿ.ಇ.), ಕೆ.ಆರ್. ವೃತ್ತದ ಮೆಕ್ಯಾನಿಕಲ್ ವಿಭಾಗದ ಹೊಸ ಕಟ್ಟಡ ನಿರ್ಮಾಣ ಕಾಮಗಾರಿಯ ಒಟ್ಟು ನಿಗದಿತ ಅಂದಾಜು ಮೊತ್ತ ರೂ.85.00 ಕೋಟಿಯಲ್ಲಿ ಅದರ ಮೂರನೇ ಒಂದು ಭಾಗದ ಮೊದಲ ಕಂತಿನ ಠೇವಣಿಯ ಮೊತ್ತವಾದ ರೂ.29.00 ಕೋಟಿಗಳ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಕುಲಸಚಿವರು ಪರಾಮರ್ಶಿತ ಟಿಪ್ಪಣಿಯನ್ನು ಮಂಡಿಸಿ, ಈ ಹಿಂದೆ ಬೆಂಗಳೂರು ವಿಶ್ವವಿದ್ಯಾಲಯವನ್ನು ವಿಭಜಿಸಿ, ತುಮಕೂರು ವಿಶ್ವವಿದ್ಯಾಲಯ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಎಂಬ ಹೊಸ ವಿಶ್ವವಿದ್ಯಾಲಯಗಳನ್ನು ಸರ್ಕಾರ ಸ್ಥಾಪಿಸಿದೆ. ಅದರಂತೆ ಬೆಂಗಳೂರು ವಿಶ್ವವಿದ್ಯಾಲಯದ ಘಟಕ ಕಾಲೇಜಾದ ವಿಶ್ವವಿದ್ಯಾಲಯದ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು (ಯು.ವಿ.ಸಿ.ಇ.) ಅನ್ನು ಐ.ಐ.ಟಿ. ಮಾದರಿಯಲ್ಲಿ ಉನ್ನತೀಕರಿಸಲು ಹೊಸ ವಿಶ್ವವಿದ್ಯಾಲಯವನ್ನಾಗಿ ಮಾರ್ಪಡಿಸಿದೆ. ಅದರ ಭಾಗವಾಗಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಹಣಕಾಸು ನೆರವು ಮತ್ತು ಭೂಮಿಯನ್ನು ನೀಡಲು ಈ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗಿದೆ. ದಿನಾಂಕ: 18-01-2022 ಹಾಗೂ 11-04-2022ರ ಸಿಂಡಿಕೇಟ್ ಸಭೆಯಲ್ಲಿ ಯು.ವಿ.ಸಿ.ಇ. ಮೆಕ್ಯಾನಿಕಲ್ ಬ್ಲಾಕ್ ಕಟ್ಟಡ ನಿರ್ಮಾಣಕ್ಕೆ ಹಣಕಾಸು ಬಿಡುಗಡೆ ಸಂಬಂಧ ನಿರ್ಣಯ ತೆಗೆದುಕೊಳ್ಳಲಾಗಿದೆ. ಸರ್ಕಾರದ ಆದೇಶ ದಿನಾಂಕ: 22-12-2021ರಲ್ಲಿ ಯು.ವಿ.ಸಿ.ಇ. ಮೆಕ್ಯಾನಿಕಲ್ ಬ್ಲಾಕ್ ಕಟ್ಟಡ ಕಟ್ಟುವ ಸಂಬಂಧ ಕಾಮಗಾರಿ ವೆಚ್ಚ ರೂ.85.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ. ಸರ್ಕಾರದ ಪತ್ರ ದಿನಾಂಕ: 21-07-2022ರಲ್ಲಿ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಸದರಿ ಕಟ್ಟಡ ಕಾಮಗಾರಿಗೆ ನಿಯಮಾನುಸಾರ ಸಕ್ಷಮ ಪ್ರಾಧಿಕಾರಕ್ಕೆ ಹಣ ಬಿಡುಗಡೆ ಮಾಡಲು ಸೂಚಿಸಲಾಗಿದೆ. ಆದಕಾರಣ ಸದರಿ ವಿಷಯವನ್ನು ಸಿಂಡಿಕೇಟ್ ಮುಂದೆ ಮಂಡಿಸಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ವಿಶೇಷ ಆಹ್ವಾನಿತರಾಗಿ ಭಾಗವಹಿಸಿದ್ದ ವಿತ್ತಾಧಿಕಾರಿಗಳು ವಿಶ್ವವಿದ್ಯಾಲಯದ ಹಣಕಾಸು ಸ್ಥಿತಿಯ ಬಗ್ಗೆ ಸಿಂಡಿಕೇಟ್‌ಗೆ ಮಾಹಿತಿ ಒದಗಿಸಿ, ಯು.ವಿ.ಸಿ.ಇ. ವಿಭಾಗದಿಂದ ಕಳೆದ ಐದು ವರ್ಷಗಳಲ್ಲಿ ರೂ.66.00 ಕೋಟಿ ಮೊತ್ತ ವಸೂಲಾಗಿದ್ದು, ಅದೇ ಅವಧಿಯಲ್ಲಿ ಒಟ್ಟು ರೂ.166.00 ಕೋಟಿ ಮೊತ್ತಗಳನ್ನು ಯು.ವಿ.ಸಿ.ಇ.ಗೆ ವಿನಿಯೋಗಿಸಲಾಗಿದ್ದು, ಈ ಮೊತ್ತದಲ್ಲಿ ವೇತನ ಮೊತ್ತವನ್ನು ಕಡಿತಗೊಳಿಸಿದಲ್ಲಿ, ರೂ.80.00 ಕೋಟಿಗಳನ್ನು ಯು.ವಿ.ಸಿ.ಇ.ಗಾಗಿ ಖರ್ಚು ಮಾಡಲಾಗಿರುತ್ತದೆ. ಮೇಲ್ಕಂಡ ಅವಧಿಯಲ್ಲಿ ಯು.ವಿ.ಸಿ.ಇ.ಯು ಹೆಚ್ಚಿನ ಆರ್ಥಿಕ

ಹೊಣೆಯನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ನೀಡಿದೆ. ಬೆಂಗಳೂರು ವಿಶ್ವವಿದ್ಯಾಲಯ ನಿವೃತ್ತಿ ಪಿಂಚಣಿದಾರರಿಗೆ ವಾರ್ಷಿಕವಾಗಿ ರೂ.76.00 ರಿಂದ 85.00 ಕೋಟಿಗಳಷ್ಟು ಅನುದಾನದ ಅವಶ್ಯಕತೆ ಇದ್ದು, 2022–23ನೇ ಸಾಲಿನಲ್ಲಿ ಸರ್ಕಾರದಿಂದ ಕೇವಲ ರೂ.15.00 ಕೋಟಿಗಳು ಬಿಡುಗಡೆಯಾಗಿರುತ್ತದೆ. ಸಾಕಷ್ಟು ನೌಕರರು ನಿವೃತ್ತಿ ಅಂಚಿನಲ್ಲಿದ್ದು, ಪ್ರತಿ ವರ್ಷ ನಿವೃತ್ತಿಹೊಂದುತ್ತಿರುವ ನೌಕರರ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿರುವುದರಿಂದ ಪಿಂಚಣಿ ವಂತಿಕೆ ನೀಡಲು ವಾರ್ಷಿಕವಾಗಿ ಸುಮಾರು ರೂ.100.00 ಕೋಟಿ ಮೊತ್ತವು ಬೇಕಾಗಿರುತ್ತದೆ. ಇಷ್ಟು ವೆಚ್ಚವನ್ನು ಭರಿಸಲು ವಿಶ್ವವಿದ್ಯಾಲಯವು ಕನಿಷ್ಠ ರೂ.2500.00 ಕೋಟಿ ನಿಶ್ಚಿತ ಠೇವಣಿಯನ್ನು ಇಡಬೇಕಾಗುತ್ತದೆ. ಪ್ರಸ್ತುತ ವಿಶ್ವವಿದ್ಯಾಲಯವು ಸ್ಥಾಪಿಸಿರುವ ಪಿಂಚಣಿ ನಿಧಿಯಲ್ಲಿ ರೂ.348.00 ಕೋಟಿ ಮೊತ್ತವಿದ್ದು, ಇದರಿಂದ ವಾರ್ಷಿಕವಾಗಿ ಸುಮಾರು ರೂ.20.00 ಕೋಟಿ ಬಡ್ಡಿ ಮಾತ್ರ ಬರುತ್ತದೆ. ಹಾಲಿ ನಿರ್ವಹಣೆ ಖಾತೆಗಳಲ್ಲಿ ಹಾಸ್ಟೆಲ್ ವೆಚ್ಚ, ಕಟ್ಟಡ ರಿಪೇರಿ ಕಾಮಗಾರಿ ವೆಚ್ಚ ಹಾಗೂ ಇತರೆ ಖರ್ಚು ವೆಚ್ಚಗಳಿಗೆ ರೂ.21.00 ಕೋಟಿಗಳು ಮಾತ್ರ ಲಭ್ಯವಿರುತ್ತದೆ. ವಿಶ್ವವಿದ್ಯಾಲಯದ ನಿಶ್ಚಿತ ಠೇವಣಿಯಾಗಿ ರೂ.248.00 ಕೋಟಿಗಳಿದೆ. ಇದರಲ್ಲಿ ಸಿಬ್ಬಂದಿಗಳ ಜಿ.ಪಿ.ಎಫ್./ಜಿ.ಐ.ಎಸ್. ಇನ್ನೂ ವೆಚ್ಚವಾಗಬೇಕಿರುವ ಪ್ರಾಜೆಕ್ಟ್ ಮೊತ್ತ, ಎಂಡೋಮೆಂಟ್ಸ್, ಅಧ್ಯಯನ ಪೀಠಗಳ ಠೇವಣಿ, ಇತ್ಯಾದಿ ಮೊತ್ತಗಳು ಸೇರಿರುತ್ತದೆ. ಬೆಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ವೆಚ್ಚ ರೂ.140.00 ಕೋಟಿಗಳನ್ನು ಭರಿಸಲು ಹಾಲಿ ಲಭ್ಯವಿರುವ ಆಂತರಿಕ ಸಂಪನ್ಮೂಲದ ತೀವ್ರ ಕೊರತೆ ಇದ್ದು, ವಾರ್ಷಿಕವಾಗಿ ರೂ.56.00 ಕೋಟಿ ವಿತ್ತೀಯ ಕೊರತೆಯನ್ನು ಹೊಂದಿರುತ್ತದೆ. ಮುಂದುವರೆದು, ವಿಶ್ವವಿದ್ಯಾಲಯದ ತ್ರಿಭಜನೆಯ ನಂತರ, ಪ್ರೊ. ಕೋರಿ ಸಮಿತಿಯ ವರದಿಯ ಆಧಾರದ ಮೆಲೆ ಬೆಂಗಳೂರು ಉತ್ತರ ಮತ್ತು ನಗರ ವಿಶ್ವವಿದ್ಯಾಲಯಗಳಲ್ಲಿ ಕೆಲಸ ನಿರ್ವಹಿಸಲು ಇಚ್ಛೆ ವ್ಯಕ್ತಪಡಿಸಿ ಬೆಂಗಳೂರು ವಿಶ್ವವಿದ್ಯಾಲಯದಿಂದ ವರ್ಗಾವಣೆಗೊಂಡಿರುವ ಶಿಕ್ಷಕರು ಮತ್ತು ಶಿಕ್ಷಕೇತರ ಸಿಬ್ಬಂದಿಗಳಿಗೆ ಪಿಂಚಣಿ ಉಪಲಬ್ಧಿಯಾಗಿ ಸುಮಾರು ರೂ.80.00 ಕೋಟಿಗಳನ್ನು ನೀಡಬೇಕಾಗಿರುತ್ತದೆ. ಇದೇ ಮಾನದಂಡದ ಆಧಾರದ ಮೇಲೆ ಪ್ರಸ್ತುತ ಬೆಂಗಳೂರು ವಿಶ್ವವಿದ್ಯಾಲಯದಿಂದ ಬೇರ್ಪಡೆಯಾಗುವ ಯು.ವಿ.ಸಿ.ಇ. ನೌಕರರಿಗೂ ಪಿಂಚಣಿ ಉಪಲಬ್ಧಿ ನೀಡಲು ಸುಮಾರು ರೂ.85.00 ಕೋಟಿಗಳನ್ನು ನೀಡಬೇಕಾಗುತ್ತದೆ. ಅಂದರೆ, ಪ್ರಸ್ತುತ ನಿಶ್ಚಿತ ಠೇವಣಿಯಲ್ಲಿರುವ ರೂ.248.00 ಕೋಟಿಗಳು ಸಾಕಾಗುವುದಿಲ್ಲ. ಇದರಿಂದ ವಿಶ್ವವಿದ್ಯಾಲಯವನ್ನು ತೀವ್ರ ಆರ್ಥಿಕ ಮುಗ್ಗಟ್ಟಿಗೆ ಗುರಿಮಾಡಿದಂತಾಗುತ್ತದೆ ಎಂದು ಮಾಹಿತಿ ನೀಡಿ, ಸರ್ಕಾರದ ನಿರ್ದೇಶಾನುಸಾರ ಮೆಕಾನಿಕಲ್ ಬ್ಲಾಕ್ ಕಟ್ಟಡ ನಿರ್ಮಾಣಕ್ಕೆ ಯು.ವಿ.ಸಿ.ಇ.ಗೆ ಅನುದಾನ ಬಿಡುಗಡೆ ಮಾಡಲು ನಿಶ್ಚಿತ ಠೇವಣಿಯನ್ನು ಅವಧಿಗೆ ಮುಂಚಿತವಾಗಿ ನಗದೀಕರಣಗೊಳಿಸಲು ಸಿಂಡಿಕೇಟ್ ಅನುಮೋದನೆ ಬೇಕಾಗುತ್ತದೆ ಎಂದು ಸಹ ತಿಳಿಸಿದರು.

ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ದಿನಾಂಕ: 30–12–2021ರಂದು ಜರುಗಿದ ಹಣಕಾಸು ಸಮಿತಿ ಸಭೆಯಲ್ಲಿ ರೂ.29.00 ಕೋಟಿಗಳನ್ನು ವಿಶ್ವವಿದ್ಯಾಲಯದಿಂದ ಬಿಡುಗಡೆ ಮಾಡಬೇಕು, ಒಂದು ವೇಳೆ ಯು.ವಿ.ಸಿ.ಇ. ವಿಶ್ವವಿದ್ಯಾಲಯದಲ್ಲೇ ಉಳಿದುಕೊಂಡರೆ, ಉಳಿದ ಮೊತ್ತವನ್ನು ಮುಂದಿನ ದಿನಗಳಲ್ಲಿ ಯು.ವಿ.ಸಿ.ಇ. ಇಂದ ಬರುವ ಶುಲ್ಕಗಳಿಂದ ಭರಿಸಬೇಕೆಂದು ನಿರ್ಣಯ ಆಗಿರುತ್ತದೆ. ಹಣಕಾಸು ವಿಷಯಗಳಲ್ಲಿ ಹಿಂದಿನ ಸಿಂಡಿಕೇಟ್ ಸಭೆಗಳಲ್ಲಿ ಸದಸ್ಯರುಗಳಿಗೆ ಪೂರ್ಣ ಮಾಹಿತಿ ನೀಡದೆ, ಕೆಲವೊಂದು ನಿರ್ಧಾರಗಳನ್ನು

ತೆಗೆದುಕೊಳ್ಳಲಾಗಿರುತ್ತದೆ ಎಂದು ತಿಳಿಸಿದರು. ಆದ್ದರಿಂದ ಈ ವಿಷಯವನ್ನು ವಿಸ್ತೃತವಾಗಿ ಚರ್ಚಿಸಿ ನಿರ್ಣಯ ತೆಗೆದುಕೊಳ್ಳುವುದು ಒಳಿತೆಂದು ತಿಳಿಸಿದರು. ಅವರು ಮುಂದುವರೆದು ಮಾತನಾಡಿ, ಈ ಮೇಲ್ಕಂಡ ಠೇವಣಿಗಳಲ್ಲಿ ರೆವಿನ್ಯೂ ವೆಚ್ಚಗಳನ್ನು ಭರಿಸುವ ಬಗ್ಗೆ ನಿರ್ದಿಷ್ಠ ಮಾಹಿತಿ ಇರುವುದಿಲ್ಲ. ವಿಶ್ವವಿದ್ಯಾಲಯದ ಶೈಕ್ಷಣಿಕ ಅಭಿವೃದ್ಧಿಗೆ ಬೇಕಾದ ಅನುದಾನ ಹಾಗೂ ವಿಭಾಗಗಳ ಖರ್ಚು ವೆಚ್ಚಗಳ ವಿವರಗಳನ್ನು ಒದಗಿಸಿಲ್ಲವೆಂದು ತಿಳಿಸಿದರು. ಹಿಂದೆ ಡಿಸೆಂಬರ್ 2021ರ ಹಣಕಾಸು ಸಮಿತಿಯಲ್ಲಿ ಆಕ್ಷೇಪಣೆ ವ್ಯಕ್ತಗೊಂಡ ಕಾರಣ ನಂತರ ಹಿಂದಿನ ಕುಲಪತಿಗಳು ಕ್ಯಾಬಿನೆಟ್ ನಿರ್ಣಯವನ್ನು ಮಾರ್ಪಡಿಸಲು ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡುವುದಾಗಿ ತಿಳಿಸಿದ್ದರು. ಆದರೆ, ಆ ಕಾರ್ಯ ಆಗಿರುವುದಿಲ್ಲವೆಂದರು.

ಕುಲಪತಿಯವರು ಮಾತನಾಡಿ, ಯು.ವಿ.ಸಿ.ಇ.ಗೆ, ಹಣಕಾಸು ಸಹಾಯ ನೀಡುವ ಬಗ್ಗೆ ಸರ್ಕಾರದಲ್ಲಿ ಆಗಿರುವ ಚರ್ಚೆ ಹಾಗೂ ನಿರ್ದೇಶನಗಳನ್ನು ಸಿಂಡಿಕೇಟ್ ಗಮನಕ್ಕೆ ತಂದರು.

ಡಾ. ಸಿ.ಆರ್. ಮಹೇಶ್ ಅವರು ಮಾತನಾಡಿ, 2021ರಲ್ಲಿ ಆದ ಹಣಕಾಸು ಸಮಿತಿ ನಿರ್ಣಯದಂತೆ ರೂ.29.00 ಕೋಟಿಗಳನ್ನು ಬಿಡುಗಡೆ ಮಾಡಿ ಉಳಿಕೆ ಮೊತ್ತವನ್ನು ಯು.ವಿ.ಸಿ.ಇ.ಯ ಆಂತರಿಕ ಮೊತ್ತದಿಂದ ಭರಿಸಬಹುದಾಗಿದೆ ಎಂದು ತಿಳಿಸಿದರು.

ಶ್ರೀ ಗೋಪಿನಾಥ್ ಅವರು ಮಾತನಾಡಿ, ಯು.ವಿ.ಸಿ.ಇ. ಇಂದ ಬರುವ ಆದಾಯ ಮತ್ತು ವೆಚ್ಚವನ್ನು ನೋಡಿದರೆ, ವೆಚ್ಚವೇ ಹೆಚ್ಚಾಗಿದ್ದು, ಪ್ರಸ್ತುತ ಇರುವ ಪ್ರಸ್ತಾವನೆ ರೂ.29.00 ಕೋಟಿಗಳು ಪ್ರಾರಂಭಿಕ ಕಂತೇ ಅಥವಾ ಇನ್ನೂ ಹೆಚ್ಚಿನ ಮೊತ್ತವನ್ನು ಮಂಜೂರು ಮಾಡಬೇಕೆ ಎಂಬುದನ್ನು ಸ್ಪಷ್ಟಪಡಿಸಬೇಕು. ಈಗಾಗಲೇ ನಿವೃತ್ತಿ ಹೊಂದಿರುವ ಯು.ವಿ.ಸಿ.ಇ. ಸಿಬ್ಬಂದಿಗಳ ಪಿಂಚಣಿ ಹೊರೆ ಹಾಗೂ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಯು.ವಿ.ಸಿ.ಇ. ಸಿಬ್ಬಂದಿಗಳಿಗೆ ಪಿಂಚಣಿ ಉಪಲಬ್ಧಿಗಳನ್ನು ಸಹ ಪರಿಗಣಿಸಬೇಕಾಗುತ್ತದೆ ಎಂದರು. ಅವರು ಮುಂದುವರೆದು ಆಯ–ವ್ಯಯ ಸಂಕ್ಷಿಪ್ತ ವಿವರಗಳ ಮಾಹಿತಿ ಒದಗಿಸಿದ್ದರೆ, ನಿರ್ಣಯ ತೆಗೆದುಕೊಳ್ಳಲು ಅನುಕೂಲವಾಗುತ್ತಿತ್ತು ಎಂದು ತಿಳಿಸಿದರು.

ಪ್ರೊ. ಸಿಂಥಿಯಾ ಮೆನೇಜಸ್ ಅವರು ಮಾತನಾಡಿ, ಪ್ರಸ್ತುತ ಇರುವ ಪಿಂಚಣಿ ಠೇವಣಿಯಿಂದ ಬರುವ ಮೊತ್ತ, ಪಿಂಚಣಿ ನೀಡಲು ಸಾಕಾಗುತ್ತದಯೇ ಎಂಬ ಬಗ್ಗೆ ಮಾಹಿತಿ ಬಯಸಿದರು. ಅವರು ಮುಂದುವರೆದು, ನಿವೃತ್ತ ನೌಕರರಲ್ಲಿ ಶೇಕಡಾ 40ರಷ್ಟು ಯು.ವಿ.ಸಿ.ಇ. ನೌಕರರಿರುತ್ತಾರೆ ಎಂದು ತಿಳಿಸಿದರು.

ವಿತ್ತಾಧಿಕಾರಿಯವರು ಮಾತನಾಡಿ ಸಿಬ್ಬಂದಿಯ ವೇತನವು ಹೆಚ್.ಆರ್.ಎಂ.ಎಸ್ ಮೂಲಕ ಪಾವತಿಯಾಗುತ್ತಿದ್ದು, ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಪಿಂಚಣಿ ಠೇವಣಿ ಮೊತ್ತದ ಆಧಾರದ ಮೇಲೆ ಸರ್ಕಾರವು ಪಿಂಚಣಿ ಉಪಲಬ್ಧಗಳಿಗೆ ಬಾಕಿ ಮೊತ್ತವನ್ನು ನೀಡುತ್ತದೆ ಎಂದು ತಿಳಿಸಿದರು.

ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ, ವಿಶ್ವವಿದ್ಯಾಲಯದ ಆಂತರಿಕವಾಗಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳಿಗೆ ಯಾವ ಮೊತ್ತವನ್ನು ಬಳಸಲಾಗುತ್ತದೆ ಎಂಬ ಬಗ್ಗೆ ಮಾಹಿತಿ ಬೇಕಾಗುತ್ತದೆಯೆಂದರು.

ಕುಲಸಚಿವರು (ಮೌಲ್ಯಮಾಪನ) ಮಾತನಾಡಿ, ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಅಡಿಯಲ್ಲಿ ಸ್ನಾತಕ ಪದವಿ ಕೋರ್ಸ್‌ಗಳನ್ನು ವಿಶ್ವವಿದ್ಯಾಲಯ ಪ್ರಾರಂಭಿಸಬೇಕಾಗಿರುವುದರಿಂದ ಹಣಕಾಸು ಅನುದಾನದ ಅವಶ್ಯಕತೆ ಇರುತ್ತದೆ ಎಂದು ತಿಳಿಸಿದರು.

ಪ್ರೊ. ವಿ.ವಿ. ಸುರೇಶ್ ಬಾಬು ಅವರು ಮಾತನಾಡಿ, ಪ್ರಸ್ತುತ ಯು.ವಿ.ಸಿ.ಇ.ನಿಂದ ನಿವೃತ್ತರಾಗಿರುವ ಸುಮಾರು 125 ಸಿಬ್ಬಂದಿಗಳಿಗೆ ವಿಶ್ವವಿದ್ಯಾಲಯದಿಂದ ಪಿಂಚಣಿ ನೀಡುತ್ತಿರುವುದಲ್ಲದೇ ಹಾಲಿ ಯು.ವಿ.ಸಿ.ಇ. ಸಿಬ್ಬಂದಿಗಳಿಗೆ ಪಿಂಚಣಿ ಉಪಲಬ್ಧಿಗಳನ್ನು ಸಹ ಮಂಜೂರು ಮಾಡಬೇಕಾಗುತ್ತದೆ. ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳು ಇರುವುದಿಲ್ಲ. ಸಭೆ ನಡೆಸಲು ಒಂದು ಬೋರ್ಡ್ ರೂಮ್ ಇರುವುದಿಲ್ಲ. ಘಟಿಕೋತ್ಸವ ನಡೆಸಲು ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಬಾಡಿಗೆ ಕಟ್ಟಲಾಗಿದೆ. ಆದ್ದರಿಂದ ಮೂಲ ಬೆಂಗಳೂರು ವಿಶ್ವವಿದ್ಯಾಲಯದ ಸ್ಥಿತಿಯನ್ನು ಪರಿಗಣಿಸಿ, ಹಂತ ಹಂತವಾಗಿ ರೂ.29.00 ಕೋಟಿ ಮೊತ್ತವನ್ನು ಬಿಡುಗಡೆ ಮಾಡಬಹುದಾಗಿದೆ ಎಂದು ತಿಳಿಸಿದರು.

ಡಾ. ಸುಧಾಕರ ಹೆಚ್ ಅವರು ಮಾತನಾಡಿ, ಯು.ವಿ.ಸಿ.ಇ.ಗೋಸ್ಕರ ವಿಶ್ವವಿದ್ಯಾಲಯದಿಂದ ಹೆಚ್ಚಿಗೆ ಖರ್ಚು ಮಾಡಲಾಗಿದೆ. ಆದುದರಿಂದ ಮೈಸೂರು ವಿಶ್ವವಿದ್ಯಾಲಯ ತೆಗೆದುಕೊಂಡಿರುವ ನಿರ್ಧಾರದಂತೆ, ಬೆಂಗಳೂರು ವಿಶ್ವವಿದ್ಯಾಲಯವೂ ಕೂಡ ಹೊಸ ಇಂಜಿನಿಯರಿಂಗ್ ಕೋರ್ಸ್‌ಗಳನ್ನು ಪ್ರಾರಂಭಿಸಬೇಕೆಂದು ತಿಳಿಸಿದರು.

ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ಪ್ರಸ್ತುತ ಬೆಂಗಳೂರು ವಿಶ್ವವಿದ್ಯಾಲಯದಿಂದ ರೂ.29.00 ಕೋಟಿಗಳನ್ನು ಯು.ವಿ.ಸಿ.ಇ.ಗೆ ನೀಡಬಹುದಾಗಿದೆ. ಮುಂದಿನ ದಿನಗಳಲ್ಲಿ ವಿಶ್ವವಿದ್ಯಾಲಯದ ಹಣಕಾಸು ಸ್ಥಿತಿಯನ್ನು ನೋಡಿಕೊಂಡು, ಸಿಂಡಿಕೇಟ್ ಮುಂದೆ ನಿರ್ಣಯ ತೆಗೆದುಕೊಳ್ಳಬಹುದಾಗಿದೆ ಎಂದು ತಿಳಿಸಿದರು.

***ನಿರ್ಣಯ:***

ಸುದೀರ್ಘ ಚರ್ಚೆಯ ನಂತರ, ವಿಶ್ವವಿದ್ಯಾಲಯದ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು (ಯು.ವಿ.ಸಿ.ಇ.), ಕೆ.ಆರ್. ವೃತ್ತದ ಮೆಕ್ಯಾನಿಕಲ್ ವಿಭಾಗದ ಹೊಸ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಪ್ರಸ್ತುತ ರೂ.29.00 ಕೋಟಿಗಳನ್ನು ಮಂಜೂರು ಮಾಡಲು ಸಿಂಡಿಕೇಟ್ ನಿರ್ಣಯಿಸಿತು. ಮುಂದುವರೆದು, ಮುಂದಿನ ದಿನಗಳಲ್ಲಿ ವಿಶ್ವವಿದ್ಯಾಲಯದ ಆರ್ಥಿಕ ಸ್ಥಿತಿಯನ್ನು ನೋಡಿಕೊಂಡು ಮುಂದೆ ಸಿಂಡಿಕೇಟ್ ಈ ಬಗ್ಗೆ ನಿರ್ಣಯ ತೆಗೆದುಕೊಳ್ಳಬಹುದಾಗಿದೆ ಎಂದು ನಿರ್ಧರಿಸಲಾಯಿತು.

***Proceedings of the Special meeting of the Syndicate held on 13.09.2022***

**ವಿಷಯ ಸಂಖ್ಯೆ 02:** ವಿಶ್ವವಿದ್ಯಾಲಯ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿಗೆ ಜ್ಞಾನಭಾರತಿ ಆವರಣದಲ್ಲಿ ಜಮೀನು ನೀಡುವ ಬಗ್ಗೆ.

ಕುಲಸಚಿವರು ವಿಷಯವನ್ನು ಮಂಡಿಸಿ ದಿನಾಂಕ:24-01-2019ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ವಿಶ್ವವಿದ್ಯಾಲಯ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿನ ಹೆಚ್ಚುವರಿ ವಿಭಾಗಗಳನ್ನು ಪ್ರಾರಂಭಿಸಲು

ಜ್ಞಾನಭಾರತಿ ಆವರಣದಲ್ಲಿ 50 ಎಕರೆ ಜಮೀನನ್ನು ಗುರುತಿಸಬೇಕೆಂದು ಆಗಿರುವ ನಿರ್ಣಯವನ್ನು ಉಲ್ಲೇಖಿಸಿ ಯು.ವಿ.ಸಿ.ಇ ಪ್ರಾಂಶುಪಾಲರು ಯು.ವಿ.ಸಿ.ಇ.ಗೆ 50 ಎಕರೆ ಜಮೀನನ್ನು ಮಂಜೂರು ಮಾಡಬೇಕೆಂದು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಸಿಂಡಿಕೇಟ್ ಪರಿಗಣನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.

ಡಾ. ಸುಧಾಕರ ಹೆಚ್ ಅವರು ಮಾತನಾಡಿ, 2019ರಲ್ಲಿ ನಿರ್ಣಯ ಆಗಿದೆ, ಈಗಾಗಲೇ ಕ್ರಮ ತೆಗೆದುಕೊಂಡಿದ್ದರೆ, ಮತ್ತೆ ಸಿಂಡಿಕೇಟ್ ಸಭೆಯ ಮುಂದೆ ತರುವ ಸಂಭವ ಬರುತ್ತಿರಲಿಲ್ಲವೆಂದು ತಿಳಿಸಿದರು.

ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ, ಪರಾಮರ್ಶಿತ ಟಿಪ್ಪಣಿಯೊಂದಿಗೆ ಮಂಡಿಸಿರುವ ಸರ್ವೆ ಸ್ಕೆಚ್‌ನಲ್ಲಿ ತೋರಿಸಿರುವ ಜಾಗವು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದ ಮುಖ್ಯ ಭಾಗದಲ್ಲಿದೆ. ಆದಕಾರಣ ವಿಶ್ವವಿದ್ಯಾಲಯದ ಅಭಿಯಂತರ ವಿಭಾಗದ ಹಿಂಬದಿಯ ಎನ್.ಜಿ.ಇ.ಎಫ್. ಬಡಾವಣೆಗೆ ಹೊಂದಿಕೊಂಡಂತೆ ಜಮೀನು ನೀಡಿದರೆ ಬೆಂಗಳೂರು ವಿಶ್ವವಿದ್ಯಾಲಯದ Structureಗೆ ತೊಂದರೆಯಾಗುವುದಿಲ್ಲವೆಂದು ತಿಳಿಸಿದರು.

ಶ್ರೀ ಗೋಪಿನಾಥ್ ಅವರು ಮಾತನಾಡಿ, ವಿಶ್ವವಿದ್ಯಾಲಯದ ಮುಖ್ಯಭಾಗದಲ್ಲಿ, ಯು.ವಿ.ಸಿ.ಇ.ಗೆ ಜಮೀನು ನೀಡುವುದಕ್ಕೆ ತಮ್ಮ ಒಪ್ಪಿಗೆ ಇರುವುದಿಲ್ಲವೆಂದು ತಿಳಿಸಿದರು. ಎನ್.ಜಿ.ಇ.ಎಫ್. ಬಡಾವಣೆಗೆ ಹೊಂದಿಕೊಂಡಂತೆ ಜಮೀನು ನೀಡುವುದಾದರೆ ಹಾಗೂ ಮುಂದೆ ಹೊಸ ಕಟ್ಟಡ ಕಟ್ಟಿಕೊಂಡ ನಂತರ ಪ್ರಸ್ತುತ ಇರುವ ಸಿವಿಲ್ ಮತ್ತು ಆರ್ಕಿಟೆಕ್ಚರ್ ವಿಭಾಗದ ಕಟ್ಟಡಗಳನ್ನು ವಿಶ್ವವಿದ್ಯಾಲಯದ ಸುಪರ್ಧಿಗೆ ಬಿಟ್ಟುಕೊಡುವುದಾದರೆ ಪ್ರಸ್ತಾವನೆಯನ್ನು ಪರಿಗಣಿಸಬಹುದಾಗಿದೆ ಎಂದು ತಿಳಿಸಿದರು.

ಎನ್.ಜಿ.ಇ.ಎಫ್. ಬಡಾವಣೆಗೆ ಹೊಂದಿಕೊಂಡಂತೆ ಇರುವ ಜಮೀನು ಸರ್ವೆ ನಂ.45 ಇರಬಹುದೆಂದು ತಿಳಿಸಲಾಯಿತು.

*ನಿರ್ಣಯ:*

ಸುದೀರ್ಘ ಚರ್ಚೆಯ ನಂತರ, ಎನ್.ಜಿ.ಇ.ಎಫ್. ಬಡಾವಣೆಯಿಂದ ರಸ್ತೆ ಇರುವುದರಿಂದ ಸದರಿ ಬಡಾವಣೆಗೆ ಹೊಂದಿಕೊಂಡಂತೆ ಕಲಾ ಗ್ರಾಮದ ಹಿಂಬದಿಯಲ್ಲಿರುವ 50(ಐವತ್ತು) ಎಕರೆ ಜಮೀನನ್ನು ಗುರುತಿಸಿ, ಸ್ಪಷ್ಟ ಚೆಕ್ಕುಬಂದಿಯೊಂದಿಗೆ ಸರ್ವೆ ನಂಬರ್ ನಮೂದಿಸಿ ಯು.ವಿ.ಸಿ.ಇ. ವಿಶ್ವವಿದ್ಯಾಲಯಕ್ಕೆ ನೀಡಲು ಸಿಂಡಿಕೇಟ್ ಅನುಮೋದಿಸಿತು. ಮುಂದುವರೆದು, ಹೊಸ ಜಾಗದಲ್ಲಿ ಕಟ್ಟಡ ನಿರ್ಮಾಣವಾದ ನಂತರ ಸಿವಿಲ್ ಮತ್ತು ಆರ್ಕಿಟೆಕ್ಚರ್ ವಿಭಾಗದ ಕಟ್ಟಡಗಳನ್ನು ಬೆಂಗಳೂರು ವಿಶ್ವವಿದ್ಯಾಲಯದ ಸುಪರ್ಧಿಗೆ ವಾಪಸ್ಸು ಬಿಟ್ಟುಕೊಡಬೇಕೆಂಬ ಷರತ್ತನ್ನು ವಿಧಿಸಿತು.



**ವಿಷಯ ಸಂಖ್ಯೆ 03:** ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿನ ಗಣೇಶ ದೇವಸ್ಥಾನವನ್ನು ಸ್ಥಳಾಂತರಿಸಿ ಹೊಸ ಜಾಗದಲ್ಲಿ ದೇವಸ್ಥಾನ ನಿರ್ಮಾಣ ಮಾಡುತ್ತಿರುವ ಬಗ್ಗೆ.

ಕುಲಸಚಿವರು ವಿಷಯ ಸೂಚಿಯನ್ನು ಮಂಡಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಕೆಂಗೇರಿ ಹೊರವರ್ತುಲ ರಸ್ತೆ–ಉಲ್ಲಾಳ ಮುಖ್ಯರಸ್ತೆ ಜಂಕ್ಷನ್‌ನಲ್ಲಿ ಗ್ರೇಡ್ ಸೆಪರೇಟರ್ ನಿರ್ಮಾಣಕ್ಕಾಗಿ

ವಿಶ್ವವಿದ್ಯಾಲಯದಿಂದ ಜಮೀನು ನೀಡಲು ಸರ್ಕಾರದ ಪತ್ರ ದಿನಾಂಕ: 25-06-2021ರಲ್ಲಿ ಅನುಮತಿ ನೀಡಿದೆ. ಸದರಿ ಅನುಮತಿಯಲ್ಲಿ ಉದ್ದೇಶಿತ ಕಾಮಗಾರಿ ವ್ಯಾಪ್ತಿಗೊಳಪಡುವ ಗಣೇಶ ದೇವಸ್ಥಾನವನ್ನು ಸ್ಥಳಾಂತರಿಸಿ ಪರ್ಯಾಯ ಜಾಗದಲ್ಲಿ ನೂತನ ಮಂದಿರವನ್ನು ನಿರ್ಮಿಸಬೇಕೆಂದು ಷರತ್ತನ್ನು ಸರ್ಕಾರ ವಿಧಿಸಿದೆ. ರಿಂಗ್ ರಸ್ತೆಗೆ ಹೊಂದಿಕೊಂಡಂತೆ ಈ ಮೊದಲೇ ಗಣೇಶ ದೇವಸ್ಥಾನ ಇದ್ದು, ಹಿಂದೆ ಕುಲಪತಿಗಳಾಗಿದ್ದ ಡಾ. ಎಂ. ನಂಜುಂಡಪ್ಪ ಅವರು ದೇವಸ್ಥಾನಕ್ಕೆ ಅಡಿಗಲ್ಲು ಹಾಕಿದ್ದರೆಂದು ಹಾಗೂ ದೇವಸ್ಥಾನ ನಿರ್ಮಣ . ಮಾಡಲು ವಿಶ್ವವಿದ್ಯಾಲಯದ ಸಿಬ್ಬಂದಿಗಳು ಧನ ಸಹಾಯ ನೀಡಿದ್ದಾರೆಂದು ತಿಳಿದುಬಂದಿದೆ. ಪ್ರಸ್ತುತ ಬಿ.ಬಿ.ಎಂ.ಪಿ. ವತಿಯಿಂದ ಬದಲಿ ಜಾಗದಲ್ಲಿ ನಿರ್ಮಿಸುತ್ತಿರುವ ದೇವಸ್ಥಾನದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ, ಶಿಕ್ಷಕ, ಶಿಕ್ಷಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಮನವಿ ಸಲ್ಲಿಸಿದ್ದು. ಸದರಿ ಮನವಿಗಳನ್ನು ಸಿಂಡಿಕೇಟ್ ಪರಿಗಣನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು. ಅವರು ಮುಂದುವರೆದು, ಗಣಪತಿ ದೇವಸ್ಥಾನ ನಿರ್ಮಾಣ ಮಾಡಲು ವಿಶ್ವವಿದ್ಯಾಲಯದ ವತಿಯಿಂದ ಯಾವುದೇ ಹಣಕಾಸು ನೆರವು ಮಂಜೂರು ಮಾಡಿರುವುದಿಲ್ಲವೆಂದು ತಿಳಿಸಿದರು.

ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ ದಿನಾಂಕ:24-03-2021ರ ಸಿಂಡಿಕೇಟ್ ಸಭೆಯಲ್ಲಿ ದೇವಸ್ಥಾನ ಕಟ್ಟಡಕ್ಕೆ ಯಾವುದೇ ಹಾನಿಯಾಗದಂತೆ ಖಾಲಿ ಇರುವ ಜಾಗವನ್ನು ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ತೆರವುಗೊಳಿಸಬೇಕಾದ ದೇವಸ್ಥಾನ ಜಾಗದ ಕಾಂಪೌಂಡ್ ಕಟ್ಟಡವನ್ನು ಪಾಲಿಕೆ ವತಿಯಿಂದಲೇ ಪುನರ್ ನಿರ್ಮಾಣ ಮಾಡಿಕೊಡಬೇಕು ಎಂದು ನಿರ್ಣಯಿಸಲಾಗಿತ್ತು. ಆದರೆ, ಸರ್ಕಾರದೊಂದಿಗೆ ಹಿಂದಿನ ಕುಲಪತಿಗಳು ಮತ್ತೆ ಪತ್ರ ವ್ಯವಹಾರ ನಡೆಸಿ, ನಂತರ ಸರ್ಕಾರದಿಂದ ಬೇರೆ ಸ್ಥಳದಲ್ಲಿ, ದೇವಸ್ಥಾನ ನಿರ್ಮಿಸಲು ಅನುಮತಿ ನೀಡಿರುವ ವಿಷಯವನ್ನು ಸಿಂಡಿಕೇಟ್ ಗಮನಕ್ಕೆ ತಂದಿರುವುದಿಲ್ಲ ಹಾಗೆ ಮಾಡಿದ್ದರೆ ಈಗಿನ ಸಂದಿಗ್ಧ ಪರಿಸ್ಥಿತಿಯನ್ನು ತಪ್ಪಿಸಬಹುದಿತ್ತು. ಬೇರೆ ಜಾಗದಲ್ಲಿ ದೇವಸ್ಥಾನ ನಿರ್ಮಿಸುವಲ್ಲಿ ತಮ್ಮ ಅಭ್ಯಂತರವಿಲ್ಲ. ಜನರ ಭಾವನೆಗೆ ಸ್ಪಂದಿಸಬೇಕಾಗುತ್ತದೆ. ಆದರೆ, ದೇವಸ್ಥಾನ ನಿರ್ವಹಣೆಯು ಬೆಂಗಳೂರು ವಿಶ್ವವಿದ್ಯಾಲಯದ ಆಡಳಿತಕ್ಕೆ ಬರಬೇಕು. ಈ ಬಗ್ಗೆ ಒಂದು ಸಮಿತಿಯನ್ನು ರಚಿಸಬೇಕೆಂದು ತಿಳಿಸಿದರು.

ಶ್ರೀ ಕುಮಾರ ಟಿ ಅವರು ಮಾತನಾಡಿ, ವಿಶ್ವವಿದ್ಯಾಲಯದ ಆವರಣದ ಒಳಗೆ ದೇವಸ್ಥಾನ ನಿರ್ಮಿಸಿದರೆ ಸಾರ್ವಜನಿಕರ ಭೇಟಿಯಿಂದಾಗಿ ವಿದ್ಯಾರ್ಥಿಗಳ ಮೇಲೆ ಪರಿಣಾಮವುಂಟಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಡಾ. ಸುಧಾಕರ ಹೆಚ್ ಅವರು ಮಾತನಾಡಿ, ಉಲ್ಲಾಳು ಜಂಕ್ಷನ್ ಅಲ್ಲಿರುವ ವಿಶ್ವವಿದ್ಯಾಲಯದ ಆವರಣದಲ್ಲಿನ ಗಣಪತಿ ದೇವಸ್ಥಾನದ ವಾರಸುದಾರರು ಯಾರು, ಅದರ ನಿರ್ವಹಣೆಯನ್ನು ಯಾರು ಮಾಡುತ್ತಿದ್ದಾರೆ ಎಂಬ ಬಗ್ಗೆ ಮಾಹಿತಿ ಇರುವುದಿಲ್ಲ. ದೇವಸ್ಥಾನದ ಟ್ರಸ್ಟ್, ರಚನೆಯಾಗಿಲ್ಲ. ದೇವಸ್ಥಾನವನ್ನು ಸ್ಥಳಾಂತರ ಮಾಡಿ, ಪೊಲೀಸ್ ಠಾಣೆಯ ಎದುರು ಹೊಸದಾಗಿ ನಿರ್ಮಿಸಿದರೆ, ಸಾರ್ವಜನಿಕರು ಓಡಾಡುವದರಿಂದ ವಾಣಿಜ್ಯ ಚಟುವಟಿಕೆಗಳಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಈಗಾಗಲೇ ನಿರ್ಮಾಣ ಮಾಡಿರುವ ಸಮುದಾಯ ಭವನದ ಕಾರ್ಯಚಟುವಟಿಕೆ ಬಗ್ಗೆ ವಿಶ್ವವಿದ್ಯಾಲಯಕ್ಕೆ ಮಾಹಿತಿ ಇರುವುದಿಲ್ಲ. ಪ್ರಸ್ತುತ ಉದ್ದೇಶಿಸಿರುವ ಬದಲಿ

ಜಾಗದಲ್ಲಿ ದೇವಸ್ಥಾನ ನಿರ್ಮಾಣ ಮಾಡಲು ನನ್ನ ಸಹಮತ ಇರುವುದಿಲ್ಲ. ಆ ಜಾಗದಲ್ಲಿ ದೇವಸ್ಥಾನ ನಿರ್ಮಿಸಲು ಸಿಂಡಿಕೇಟ್ ಅನುಮೋದನೆ ಪಡೆದಿರುವುದಿಲ್ಲ ಮತ್ತು ವಿಶ್ವವಿದ್ಯಾಲಯದ ಆಡಳಿತದಿಂದ ಚಕ್ಕುಬಂದಿ ತೋರಿಸಿ ಜಾಗ ಮಂಜೂರು ಮಾಡಿರುವುದಿಲ್ಲ. ಆದುದರಿಂದ ಈಗ ಪ್ರಾರಂಭಿಸಿರುವ ದೇವಸ್ಥಾನದ ಕಾಮಗಾರಿಯನ್ನು ತಕ್ಷಣ ನಿಲ್ಲಿಸಿ, ವಿಶ್ವವಿದ್ಯಾಲಯದ ಕಾರ್ಯ ಚಟುವಟಿಕೆಗಳಿಗೆ ತೊಂದರೆಯಾಗದ ರೀತಿ ಸರ್ಕಾರದ ಆದೇಶದಂತೆ ಒಂದು ಜಾಗ ತೋರಿಸಿ, ಚಕ್ಕುಬಂದಿಯೊಂದಿಗೆ ಜಮೀನು ನೀಡಬಹುದಾಗಿದೆ ಹಾಗೂ ಈ ಬಗ್ಗೆ ಸೌಹಾರ್ದಯುತವಾಗಿ ಸಮಸ್ಯೆ ಬಗೆಹರಿಸಲು ಹಾಗೂ ಸ್ಥಳ ಗುರುತಿಸಲು ಒಂದು ಸಮಿತಿ ರಚನೆ ಮಾಡಿ ವರದಿ ಪಡೆದುಕೊಳ್ಳಬೇಕು ಹಾಗೂ ದೇವಸ್ಥಾನದ ನಿರ್ವಹಣೆ ಮತ್ತು ಆದಾಯ ವಿಶ್ವವಿದ್ಯಾಲಯದ ಆಡಳಿತ ವ್ಯಾಪ್ತಿಗೆ ತರಬೇಕು ಈ ಬಗ್ಗೆ ಕುಲಸಚಿವರನ್ನೊಳಗೊಂಡ ದೇವಸ್ಥಾನ ನಿರ್ವಹಣಾ ಸಮಿತಿ ರಚನೆಯಾಗಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಈ ಬಗ್ಗೆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಬಿಬಿಎಂಪಿ ಅಧಿಕಾರಿಗಳೊಂದಿಗೆ ಚರ್ಚಿಸಿದಂತೆ, ದೇವಸ್ಥಾನ ನಿರ್ಮಾಣ ಕಾಮಗಾರಿಯನ್ನು ನಿಲ್ಲಿಸಲು ಪತ್ರ ಕಳುಹಿಸಿದ್ದೇವೆ. ಆದರೆ, ಬಿಬಿಎಂಪಿ ಅಧಿಕಾರಿಗಳು ಅದನ್ನು ಸ್ವೀಕರಿಸಲು ನಿರಾಕರಿಸಿದ್ದಾರೆ ಎಂದು ಸಿಂಡಿಕೇಟ್ ಗಮನಕ್ಕೆ ತಂದರು.

ಡಾ. ಸಿ.ಆರ್. ಮಹೇಶ್ ಅವರು ಮಾತನಾಡಿ, ಈಗಾಗಲೇ ವಿಶ್ವವಿದ್ಯಾಲಯದ ನೌಕರರ ಸಾಲ ಸಹಕಾರ ಸಂಘದ ವತಿಯಿಂದ ನಿರ್ಮಿಸಿರುವ ಸಮುದಾಯಭವನದ ಆವರಣದೊಳಗಡೆ ಅಥವಾ ಸಮುದಾಯ ಭವನದ ಕಾಂಪೌಂಡ್‌ಗೆ ಹೊಂದಿಕೊಂಡಂತೆ ದೇವಸ್ಥಾನ ನಿರ್ಮಿಸಿದರೆ, ಸಮುದಾಯ ಭವನಕ್ಕೂ ಅನುಕೂಲವಾಗುವುದೆಂದು ತಿಳಿಸಿದರು. ಅವರು ಮುಂದುವರೆದು, ದೇವಸ್ಥಾನ ಹಾಗೂ ಸಮುದಾಯ ಭವನದ ಕಾರ್ಯ ನಿರ್ವಹಣೆಯನ್ನು ವಿಶ್ವವಿದ್ಯಾಲಯದ ಆಡಳಿತ ವ್ಯಾಪ್ತಿಗೆ ತರಬೇಕೆಂದು ತಿಳಿಸಿದರು.

ಡಾ. ಧನಂಜಯ ಬಿ.ಆರ್. ಅವರು ಮಾತನಾಡಿ, ಸಾರ್ವಜನಿಕರ ಧಾರ್ಮಿಕ ಭಾವನೆಗೆ ಧಕ್ಕೆಯಾದ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

ಡಾ. ಎಂ.ವಿ. ಆಶಾ ಅವರು ಮಾತನಾಡಿ, ಬೇರೆ ಜಾಗದ ಬದಲಾಗಿ, ಪ್ರಸ್ತುತ ದೇವಸ್ಥಾನ ಇರುವ ಜಾಗದ ಪಕ್ಕದಲ್ಲೇ ದೇವಸ್ಥಾನ ನಿರ್ಮಿಸುವುದು ಒಳಿತೆಂದು ತಿಳಿಸಿದರು.

ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ದೇವಸ್ಥಾನದ ನಿರ್ಮಾಣ ಮಾಡುವುದಕ್ಕೆ ತಮ್ಮ ವಿರೋಧವಿಲ್ಲವೆಂದು ತಿಳಿಸಿ ಸಾರ್ವಜನಿಕರ ಧಾರ್ಮಿಕ ಭಾವನೆಗೆ ಧಕ್ಕೆ ಬರದ ಹಾಗೆ ಸಮಸ್ಯೆಯನ್ನು ಭಗೆಹರಿಸಬೇಕು. ದೇವಸ್ಥಾನ ನಿರ್ಮಾಣವಾದ ನಂತರ ವಿಶ್ವವಿದ್ಯಾಲಯದ ಸುಪರ್ಧಿಗೆ ತಂದು, ಪ್ರತ್ಯೇಕ ನಿಧಿಯನ್ನು ಸ್ಥಾಪಿಸಬೇಕು. ವಿಶ್ವವಿದ್ಯಾಲಯದ ವತಿಯಿಂದಲೇ ಅರ್ಚಕರನ್ನು ನೇಮಿಸಿ ದೇವಸ್ಥಾನ ಕಾರ್ಯ ನಿರ್ವಹಣೆಗೆ ಸಮಿತಿ ರಚಿಸಬೇಕೆಂದು ತಿಳಿಸಿದರು.

ಡಾ. ವಿ.ವಿ. ಸುರೇಶ್ ಬಾಬು ಅವರು ಮಾತನಾಡಿ, ದೇವಸ್ಥಾನದ ನಿರ್ಮಾಣದಿಂದಾಗಿ ವಿಶ್ವವಿದ್ಯಾಲಯದ ಆವರಣದಲ್ಲಿ ವಾಣಿಜ್ಯ ಚಟುವಟಿಕೆಗಳಿಗೆ ಅವಕಾಶ ನೀಡಬಾರದೆಂದು ಕೋರಿದರು.

**ನಿರ್ಣಯ:**

ಸುದೀರ್ಘ ಚರ್ಚೆಯ ನಂತರ, ಬಿಬಿಎಂಪಿ ವತಿಯಿಂದ ಗ್ರೇಡ್ ಸೆಪರೇಟರ್ ನಿರ್ಮಾಣ ಕಾಮಗಾರಿ ಪ್ರಯುಕ್ತ ಪ್ರಸ್ತುತ ರಿಂಗ್ ರಸ್ತೆಗೆ ಹೊಂದಿಕೊಂಡಿರುವ ಗಣಪತಿ ದೇವಸ್ಥಾನವನ್ನು ತೆರವುಗೊಳಿಸಿ ಬದಲಿ ಜಾಗದಲ್ಲಿ, ಹೊಸದಾಗಿ ಗಣಪತಿ ದೇವಸ್ಥಾನ ನಿರ್ಮಿಸಲು ಅಭ್ಯಂತರವಿಲ್ಲವೆಂದು ಸಿಂಡಿಕೇಟ್ ಅಭಿಪ್ರಾಯಪಟ್ಟಿತು. ಆದರೆ, ವಿಶ್ವವಿದ್ಯಾಲಯದ ನೌಕರರ ಸಾಲ ಸಹಕಾರ ಸಂಘದ ಸಮುದಾಯ ಭವನಕ್ಕೆ ಅನುಕೂಲವಾಗುವಂತೆ, ಸದರಿ ಸಮುದಾಯ ಭವನಕ್ಕೆ ಹೊಂದಿಕೊಂಡಂತೆ ದೇವಸ್ಥಾನ ನಿರ್ಮಾಣ ಮಾಡಲು ಸೂಕ್ತ ಸ್ಥಳವನ್ನು ಸೂಚಿಸಲು ಹಾಗೂ ಈ ಬಗ್ಗೆ ಉನ್ನತ ಶಿಕ್ಷಣ ಸಚಿವರು ಹಾಗೂ ಸಂಬಂಧಪಟ್ಟ ಸಚಿವರಿಗೆ ಮನವರಿಕೆ ಮಾಡಿಕೊಡಲು ಸೂಕ್ತ ಕ್ರಮ ಕೈಗೊಳ್ಳಲು ಕೆಳಕಂಡ ನಿಯೋಗವನ್ನು ರಚಿಸಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

| | | |
|---|---|---|
| 1. | ಕುಲಸಚಿವರು | ಅಧ್ಯಕ್ಷರು |
| 2. | ಡಾ. ಸುಧಾಕರ ಹೆಚ್ | ಸದಸ್ಯರು |
| 3. | ಶ್ರೀ ಉದಯ ಕುಮಾರ್ ಎಮ್ | ಸದಸ್ಯರು |
| 4. | ಪ್ರೊ. ಟಿ.ವಿ. ರಾಜು | ಸದಸ್ಯರು |
| 5. | ಶ್ರೀ ಗೋಪಿನಾಥ್ | ಸದಸ್ಯರು |
| 6. | ವಿಶ್ವವಿದ್ಯಾಲಯ ಅಭಿಯಂತರರು | ಸದಸ್ಯರು/ಸಂಯೋಜಕರು |

ಮುಂದುವರೆದು, ದೇವಸ್ಥಾನದ ನಿರ್ವಹಣೆಯನ್ನು ವಿಶ್ವವಿದ್ಯಾಲಯದ ಆಡಳಿತದಿಂದಲೇ ನಿರ್ವಹಿಸಬೇಕು ಹಾಗೂ ಈ ಸಂಬಂಧ ಕುಲಸಚಿವರನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಬೇಕೆಂದು ಸಿಂಡಿಕೇಟ್ ತೀರ್ಮಾನಿಸಿತು.



**ವಿಷಯ ಸಂಖ್ಯೆ 04:** ಜ್ಞಾನಭಾರತಿ ಆವರಣದಲ್ಲಿ ಗಂಧದ ಮರಗಳನ್ನು ಆಗಿಂದಾಗ್ಯೆ ಕಡಿಯುತ್ತಿರುವ ಬಗ್ಗೆ ಹಾಗೂ ಗಂಧದ ಮರಗಳನ್ನು ಕಡಿದಿರುವ ಬಗ್ಗೆ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಾಗಿರುವ ಬಗ್ಗೆ.

ಕುಲಸಚಿವರು ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಕೇಂದ್ರದ ಆವರಣದಲ್ಲಿ ಹಾಗೂ ಆರೋಗ್ಯ ಕೇಂದ್ರದ ಮುಂಭಾಗದಲ್ಲಿ ಅಪರಿಚಿತರು ಗಂಧದ ಮರಗಳನ್ನು ಕಡಿದಿರುವ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ ಎಫ್.ಐ.ಆರ್. ಮಾಡಲಾಗಿರುತ್ತದೆ ಎಂದು ಸಿಂಡಿಕೇಟ್ ಗಮನಕ್ಕೆ ತಂದರು.

ಶ್ರೀ ಗೋಪಿನಾಥ್ ಅವರು ಮಾತನಾಡಿ, ಶ್ರೀಗಂಧ ಹಾಗೂ ಇತರ ಬೆಲೆ ಬಾಳುವ ಮರಗಳ ಕಳ್ಳತನವನ್ನು ತಡೆಗಟ್ಟಲು 50 ರಿಂದ 60 ಸೆಕ್ಯುರಿಟಿ ಕ್ಯಾಮೆರಾ ಅಳವಡಿಸಬೇಕು ಹಾಗೂ ಪ್ರಸ್ತುತ ಇರುವ ಭದ್ರತಾ ಸಿಬ್ಬಂದಿಯನ್ನು ಬದಲಾಯಿಸಿ ವಿಶೇಷ ಭದ್ರತಾ ಪಡೆಯನ್ನು ನಿಯೋಜಿಸಬೇಕೆಂದು ತಿಳಿಸಿದರು.

ಡಾ. ಸಿಂಥಿಯಾ ಮೆನೇಜಸ್ ಅವರು ಮಾತನಾಡಿ, ರಾತ್ರಿ 9.00 ಗಂಟೆಯ ನಂತರ ವಿಶ್ವವಿದ್ಯಾಲಯದ ಆವರಣಕ್ಕೆ ಪ್ರವೇಶ ನಿರ್ಭಂದಿಸಲು ಗೇಟ್ ಅಳವಡಿಸಬೇಕೆಂದು ಸಲಹೆ ನೀಡಿದರು.

ಶ್ರಿ ವಿದೇಯ ಬೆಳಗೋಡೆ ಶ್ರೀಕಂಠ ಅವರು ಮಾತನಾಡಿ, ವಿಶ್ವವಿದ್ಯಾಲಯದ ಆವರಣ ಸುತ್ತಲೂ ತಂತಿ ಬೇಲಿ ಅಥವಾ ಕಾಂಪೌಂಡ್ ನಿರ್ಮಿಸಬೇಕೆಂದು ತಿಳಿಸಿದರು.

ಡಾ. ಸುಧಾಕರ ಹೆಚ್ ಮತ್ತು ಪ್ರೊ. ಟಿ.ವಿ. ರಾಜು ಅವರುಗಳು ಮಾತನಾಡಿ, ಹೋಮ್ ಗಾರ್ಡ್‌ಗಳನ್ನು ಬದಲಾಯಿಸಿ, ಬೇರೆ ಸೆಕ್ಯುರಿಟಿಯನ್ನು ನೇಮಿಸಬೇಕು, ಬಯೋಪಾರ್ಕ್ ಸೇರಿ ಪ್ರಮುಖ ಸ್ಥಳಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಅಳವಡಿಸಬೇಕೆಂದು ತಿಳಿಸಿದರು.

ಕುಲಪತಿಗಳು ಉತ್ತರಿಸಿ ಈಗಾಗಲೇ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದ್ದು, ಈ ಬಗ್ಗೆ ತನಿಖೆಯ ಪ್ರಗತಿಯನ್ನು ಪರಿಶೀಲಿಸಲು ಕ್ರಮವಹಿಸಲಾಗುವುದು. ಭದ್ರತಾ ವ್ಯವಸ್ಥೆಯನ್ನು ಬಲಪಡಿಸಲು ಸರ್ಕಾರದೊಂದಿಗೆ ಸಮಾಲೋಚಿಸಲಾಗುವುದೆಂದು ತಿಳಿಸಿದರು.

**ನಿರ್ಣಯ:**

ಸುದೀರ್ಘ ಚರ್ಚೆಯ ನಂತರ, ಭದ್ರತಾ ವ್ಯವಸ್ಥೆಯನ್ನು ಬದಲಿಸುವ ಬಗ್ಗೆ ಪರಿಶೀಲಿಸಿ ಹಾಗೂ ಸಿ.ಸಿ.ಟಿ.ವಿ. ಮತ್ತು ಸೋಲಾರ್ ಲೈಟ್ ಅಳವಡಿಸುವ ಬಗ್ಗೆ ಸೂಕ್ತ ಪ್ರಸ್ತಾವನೆಯೊಂದಿಗೆ ಮುಂದಿನ ಸಿಂಡಿಕೇಟ್ ಸಭೆಯ ಮುಂದೆ ವಿಷಯವನ್ನು ಮಂಡಿಸಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

***Proceedings of the Special meeting of the Syndicate held on 13.09.2022***

**ವಿಷಯ ಸಂಖ್ಯೆ 05:** ವಿವಿಧ ಸಂಘಗಳು Inter University Centre for Yogic Sciences, Central University of Karnataka, Kalburgi, Regional Centre for Council of Architecture ಮತ್ತು Development Central Board of Secondary Education ಸಂಸ್ಥೆಗಳಿಗೆ ವಿಶ್ವವಿದ್ಯಾಲಯದಲ್ಲಿ ಜಮೀನು ನೀಡಿರುವುದಕ್ಕೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿರುವ ಕುರಿತು.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ 1112 ಎಕರೆ ಜಮೀನಿನಲ್ಲಿ ಈಗಾಗಲೇ 297 ಎಕರೆ ಜಮೀನನ್ನು ಇತರ ಸಂಸ್ಥೆಗಳಿಗೆ ಭೋಗ್ಯದ ಆಧಾರದ ಮೇಲೆ ನೀಡಲಾಗಿದೆ. ಇತ್ತೀಚಿಗೆ ಬೆಂಗಳೂರು ವಿಶ್ವವಿದ್ಯಾಲಯವು Inter University Centre for Yogic Sciences, Central University of Karnataka, Kalburgi, Regional Centre for Council of Architecture ಮತ್ತು Development Central Board of Secondary Education ಸಂಸ್ಥೆಗಳಿಗೆ ಜಮೀನು ನೀಡಿರುವುದಕ್ಕೆ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಶಿಕ್ಷಕೇತರ ಸಿಬ್ಬಂದಿಗಳಿಂದ ಆಕ್ಷೇಪಣೆ ವ್ಯಕ್ತಪಡಿಸಿ ಮನವಿ ಸಲ್ಲಿಸಿರುತ್ತಾರೆ. ಸಾರ್ವಜನಿಕರಲ್ಲೂ ಟೀಕೆ ವ್ಯಕ್ತವಾಗಿದೆ. ಕಾರಣ ಸದರಿ ಜಮೀನಿನಲ್ಲಿ

ಬಯೋಪಾರ್ಕ್ ಹಾಗೂ ಬೆಲೆ ಬಾಳುವ ಗಿಡಮರಗಳು ಇರುವುದರಿಂದ ಜಮೀನನ್ನು ಹಸ್ತಾಂತರಿಸಬಾರದೆಂದು ಒತ್ತಾಯಿಸಿದ್ದಾರೆ ಎಂದು ಸಭೆಗೆ ಮಾಹಿತಿ ನೀಡಿದರು.

ಡಾ. ಸುಧಾಕರ ಹೆಚ್ ಅವರು ಮಾತನಾಡಿ, Inter University Centre for Yogic Sciences ಎಂಬ ಹೆಸರಿನ ಸಂಸ್ಥೆಯು ಸೊಸೈಟಿ ಆಗಿದ್ದು, ವಿಶ್ವವಿದ್ಯಾಲಯದಿಂದ ಖಾಸಗಿ ಸೊಸೈಟಿಗೆ ಜಮೀನು ನೀಡಲಾಗಿದೆ ಎಂದು ತಿಳಿಸಿ, ಜಮೀನನ್ನು ವಾಪಸ್ಸು ಪಡೆಯಬೇಕೆಂದು ತಿಳಿಸಿದರು.

ಡಾ. ಸಿ.ಆರ್. ಮಹೇಶ್ ಅವರು ಮಾತನಾಡಿ, ಬೇರೆ ಸಂಸ್ಥೆಗಳಿಗೆ ಜಮೀನು ನೀಡುವ ಸಂದರ್ಭದಲ್ಲಿ, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ವಿನಿಮಯ ಹಾಗು ಆ ಸಂಸ್ಥೆ ಅಭಿವೃದ್ಧಿಪಡಿಸುವ ಶೈಕ್ಷಣಿಕ ಸವಲತ್ತುಗಳನ್ನು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಉಪಯೋಗಿಸಿಕೊಳ್ಳಲು ಅವಕಾಶ ನೀಡುವಂತೆ ಷರತ್ತು ವಿಧಿಸಬೇಕಾಗುತ್ತದೆ. ಆದರೆ, ಈಗಾಲೇ ವಿಶ್ವವಿದ್ಯಾಲಯದಿಂದ ಜಮೀನು ಪಡೆದು ಜ್ಞಾನಭಾರತಿ ಆವರಣದಲ್ಲಿ ಕ್ಯಾಂಪಸ್ ನಿರ್ಮಿಸಿರುವ ಸಂಸ್ಥೆಗಳು ತಮ್ಮ ಆವರಣಗಳಿಗೆ ವಿಶ್ವವಿದ್ಯಾಲಯದ ವಿದ್ಯಾರ್ಥಿ ಅಥವಾ ಶಿಕ್ಷಕರುಗಳಿಗೆ ಪ್ರವೇಶ ನೀಡುವುದಿಲ್ಲವೆಂದು ತಿಳಿಸಿದರು.

ಒಡಂಬಡಿಕೆ ಆದನಂತರ ಕಲಬುರ್ಗಿಯ ಕೇಂದ್ರೀಯ ವಿಶ್ವವಿದ್ಯಾಲಯದಿಂದ ಯಾವುದೇ ಪತ್ರ ವ್ಯವಹಾರ ನಡೆಯದ ಕಾರಣ ಹಾಗೂ ಅಪಾರ ಸಸ್ಯ ಸಂಪತ್ತು ಇರುವುದರಿಂದ, ಸದರಿ ವಿಶ್ವವಿದ್ಯಾಲಯಕ್ಕೆ ನೀಡಿರುವ ಜಮೀನನ್ನು ಹಿಂಪಡೆಯಬಹುದಾಗಿದೆ ಎಂದು ಕುಲಪತಿಗಳು ತಿಳಿಸಿದರು. ಅವರು ಮುಂದುವರೆದು, ಅಂತರ್ ವಿಶ್ವವಿದ್ಯಾಲಯ ಯೋಗ ಕೇಂದ್ರಕ್ಕೆ ನೀಡಿರುವ ಜಮೀನು ರಕ್ತ ಚಂದನ, ಶ್ರೀಗಂಧ ಹಾಗೂ ಅತಿ ವಿರಳವಾದ ಸಸ್ಯಪ್ರಬೇಧಕ್ಕೆ ಸೇರಿದ ಮರಗಿಡಗಳು ಸೇರಿ ಲಕ್ಷಾಂತರ ಮರಗಿಡಗಳನ್ನು ಒಳಗೊಂಡ ಬಯೋಪಾರ್ಕ್ ಜಾಗದಲ್ಲಿದೆ ಎಂದು ಸಿಂಡಿಕೇಟ್ ಗಮನಕ್ಕೆ ತಂದರು. ಈ ಬಗ್ಗೆ ಒಂದು ವೈಜ್ಞಾನಿಕ ವರದಿ ಸಲ್ಲಿಸಲು ಸಮಿತಿಯನ್ನು ರಚಿಸಬಹುದಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ದೀರ್ಘ ಚರ್ಚೆಯ ನಂತರ, ಮೇಲ್ಕಂಡ ಕಾರಣಗಳಿಂದಾಗಿ ಜ್ಞಾನಭಾರತಿ ಆವರಣದ ಸರ್ವೆ ನಂಬರ್ 94ರಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯದ ಕಲಬುರ್ಗಿ, ಇವರಿಗೆ ನೀಡಿರುವ 10 ಎಕರೆ ಜಮೀನನ್ನು ಹಿಂಪಡೆಯಲು ಮತ್ತು ಈಗಾಗಲೇ ಸದರಿ ವಿಶ್ವವಿದ್ಯಾಲಯದೊಂದಿಗೆ ಆಗಿರುವ ಒಡಂಬಡಿಕೆಯನ್ನು ರದ್ದುಪಡಿಸಲು ಸಿಂಡಿಕೇಟ್ ನಿರ್ಣಯಿಸಿತು. ಮುಂದುವರೆದು, Inter University Centre for Yogic Sciences ಗೆ ನೀಡಿರುವ ಜಾಗದಲ್ಲಿ ರಕ್ತ ಚಂದನ, ಶ್ರೀಗಂಧ ಹಾಗೂ ಅತಿ ವಿರಳವಾದ ಸಸ್ಯಪ್ರಬೇಧ ಒಳಗೊಂಡಂತೆ ಲಕ್ಷಾಂತರ ಮರಗಿಡಗಳು

ಇರುವುದರಿಂದ ಈ ಬಗ್ಗೆ ಒಂದು ವೈಜ್ಞಾನಿಕ ವರದಿಯನ್ನು ಸಲ್ಲಿಸಲು ಈ ಕೆಳಕಂಡ ಸಮಿತಿಯನ್ನು ರಚಿಸಲು ಸಿಂಡಿಕೇಟ್ ಸರ್ವಾನುಮತದಿಂದ ನಿರ್ಣಯಿಸಿತು.

| | | |
|---|---|---|
| 1. | ಪ್ರೊ. ಟಿ.ವಿ. ರಾಜು | ಅಧ್ಯಕ್ಷರು |
| 2. | ಕುಲಸಚಿವರು(ಮೌಲ್ಯಮಾಪನ) | ಸದಸ್ಯರು |
| 3. | ಪ್ರೊ. ವಿ.ವಿ. ಸುರೇಶ್ ಬಾಬು | ಸದಸ್ಯರು |
| 4. | ಪ್ರೊ. ಸಿ. ಶ್ರೀನಿವಾಸ್<br>ಸೂಕ್ಷ್ಮಜೀವಶಾಸ್ತ್ರ ಮತ್ತು ಜೀವತಂತ್ರಜ್ಞಾನ ವಿಭಾಗ | ಸದಸ್ಯರು |
| 5. | ಪ್ರೊ. ಟಿ.ಜಿ. ಉಮೇಶ್<br>ಸಸ್ಯಶಾಸ್ತ್ರ ವಿಭಾಗ, | ಸದಸ್ಯರು |
| 6. | ಪ್ರೊ. ಕೆ.ಎಲ್. ಪ್ರಕಾಶ್<br>ಸೂಕ್ಷ್ಮ ಜೀವಶಾಸ್ತ್ರ ವಿಭಾಗ | ಸದಸ್ಯರು |
| 7. | ಡಾ. ಎಸ್.ಟಿ. ಗಿರೀಶ್<br>ಸಂಚಾಲಕರು, ಬಯೋಪಾರ್ಕ್ | ಸಂಚಾಲಕರು |

ಸದರಿ ಸಮಿತಿಯು ಆದಷ್ಟುಬೇಗ ಅಂದರೆ ಸಮಿತಿಯು ರಚನೆಗೊಂಡ 10 ದಿವಸಗಳ ಒಳಗಾಗಿ ವರದಿ ಸಲ್ಲಿಸಬೇಕೆಂದು ಸಿಂಡಿಕೇಟ್ ಸೂಚಿಸಿತು.

***Proceedings of the Special meeting of the Syndicate held on 13.09.2022***

**ವಿಷಯ ಸಂಖ್ಯೆ 06:** 2022–2023ನೇ ಶೈಕ್ಷಣಿಕ ಸಾಲಿಗೆ ಕಾಲೇಜುಗಳ ಸಂಯೋಜನಾ ನವೀಕರಣದ ನಿಮಿತ್ತ ನೇಮಕ ಮಾಡಿದ ಸ್ಥಳೀಯ ವಿಚಾರಣಾ ಸಮಿತಿಗಳ ಅಧ್ಯಕ್ಷರು ಸಲ್ಲಿಸಿದ ವರದಿಗಳನ್ನು ಪರಿಗಣಿಸುವ ಬಗೆಗೆ.

ಡಾ. ಸಿ.ಆರ್ ಮಹೇಶ್ ಹಾಗೂ ಪ್ರೊ. ವಿ.ವಿ. ಸುರೇಶ್ ಬಾಬು ಅವರು ಮಾತನಾಡಿ, ಸ್ಥಳೀಯ ವಿಚಾರಣಾ ಸಮಿತಿಯು ತನ್ನ ವರದಿಯಲ್ಲಿ ಶಿಕ್ಷಕರ ನೇಮಕಾತಿಯಲ್ಲಿ ಮೀಸಲಾತಿಯನ್ನು ಅನುಸರಿಸಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಶಿಕ್ಷಕರನ್ನು ನೇಮಕ ಮಾಡಲು ವರದಿಯ ಅಬ್ಸರ್ವೇಶನ್ ಕಲಂನಲ್ಲಿ ಸೂಚಿಸಿದ್ದರೂ ಸಹ ಸ್ಥಳೀಯ ವಿಚಾರಣಾ ಸಮಿತಿಯ ಶಿಫಾರಸ್ಸನ್ನು ಕೆಲವು ಕಾಲೇಜುಗಳು ಅನುಷ್ಠಾನಗೊಳಿಸಿರುವುದಿಲ್ಲವೆಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, 2022–2023ನೇ ಶೈಕ್ಷಣಿಕ ಸಾಲಿಗೆ ಕಾಲೇಜುಗಳ ಸಂಯೋಜನಾ ನವೀಕರಣದ ನಿಮಿತ್ತ ನೇಮಕ ಮಾಡಿದ ಸ್ಥಳೀಯ ವಿಚಾರಣಾ ಸಮಿತಿಗಳ ಅಧ್ಯಕ್ಷರು ಸಲ್ಲಿಸಿದ ವರದಿಗಳನ್ನು ಕೆ.ಎಸ್.ಯು. ಅಧಿನಿಯಮ 2000ದ ಪ್ರಕರಣ 59(9)ರ ಅಡಿಯಲ್ಲಿ ಪರಿಗಣಿಸಿ ಸದರಿ ವಿಷಯದಲ್ಲಿ ದಿನಾಂಕ:17–08–2022ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಮರುಪರಿಗಣಿಸಿ ಕೆಳಕಂಡಂತೆ ಅನುಮೋದಿಸಿತು.

| ಕ್ರ. ಸಂ. | ಕಾಲೇಜು | ಶಿಫಾರಸ್ಸು (ಕನಿಷ್ಠ ಅಂಕ: ಸಂಯೋಜನಾ ನವೀಕರಣ 45, ವಿದ್ಯಾರ್ಥಿ ಪ್ರಮಾಣದ ಹೆಚ್ಚಳ: 50) | ಸಿಂಡಿಕೇಟ್ ಶಿಫಾರಸ್ಸು |
|---|---|---|---|
| 1. | ಫ್ಲಾರ್ಕ್ ಕಾಲೇಜ್ ಆಫ್ ಎಜುಕೇಷ, ಬೆಂಗಳೂರು (ವರದಿ ದಿನಾಂಕ:30-06-2022) | ಸಂಯೋಜನಾ ನವೀಕರಣಕ್ಕೆ ಶಿಫಾರಸ್ಸು ಮಾಡಲಾಗಿದೆ (67.63) (ಬಿ.ಇಡಿ) | ಸಂಬಂಧಪಟ್ಟ ಸ್ಥಳೀಯ ವಿಚಾರಣಾ ಸಮಿತಿಯ ವರದಿಯ ಶಿಫಾರಸ್ಸನ್ನು ಅನುಮೋದಿಸಿತು |
| 2. | ಟ್ರಾನ್ಸೆಂಡ್ ಪದವಿ ಕಾಲೇಜು, ಬೆಂಗಳೂರು (ತಿದ್ದುಪಡಿ ವರದಿ ದಿನಾಂಕ: 19-07-2022) | ಬಿ.ಕಾಂ. ಕೋರ್ಸಿನ ವಿದ್ಯಾರ್ಥಿ ಪ್ರಮಾಣವನ್ನು 180 ರಿಂದ 220ಕ್ಕೆ ಹೆಚ್ಚಿಸಲು ಶಿಫಾರಸ್ಸು ಮಾಡಲಾಗಿದೆ. (68.00) | ವಿದ್ಯಾರ್ಥಿ ಪ್ರಮಾಣದ ಹೆಚ್ಚಳಕ್ಕೆ ಸಂಬಂಧಿಸಿದಂತೆ ಸ್ಥಳೀಯ ವಿಚಾರಣಾ ಸಮಿತಿಯ ತಿದ್ದುಪಡಿ ವರದಿಯ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು |
| 3. | ಸಂಯುಕ್ತ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್, ಎಲೆಕ್ಟ್ರಾನಿ ಸಿಟಿ ಅಂಚೆ, ಬೆಂಗಳೂರು (ವರದಿ ದಿನಾಂಕ: 15-07-2022) | ಸಂಯೋಜನಾ ನವೀಕರಣಕ್ಕೆ ಶಿಫಾರಸ್ಸು ಮಾಡಿರುವುದಿಲ್ಲ (21.91) (ಬಿ.ಕಾಂ., ಬಿಬಿಎ) | ಸಂಬಂಧಪಟ್ಟ ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಪರಿಗಣಿಸಿ, ಕಾಲೇಜು ಇತ್ತೀಚೆಗಷ್ಟೆ ಪ್ರಾರಂಭವಾಗಿರುವುದರಿಂದ, ಸಂಯೋಜನಾ ನವೀಕರಣಕ್ಕೆ ಸಿಂಡಿಕೇಟ್ ಶಿಫಾರಸ್ಸು ಮಾಡಿತು |
| 4. | ನ್ಯೂ ಬಾಲ್ಡ್‌ವಿನ್ ಪದವಿ ಕಾಲೇಜು, ಲಕ್ಷ್ಮನನಗರ ಬೆಂಗಳೂರು (ವರದಿ ದಿನಾಂಕ:30-07-2022) | ಸಂಯೋಜನಾ ನವೀಕರಣಕ್ಕೆ ಶಿಫಾರಸ್ಸು ಮಾಡಲಾಗಿದೆ (44.19) (ಬಿ.ಕಾಂ.) | ಸಂಬಂಧಪಟ್ಟ ಸ್ಥಳೀಯ ವಿಚಾರಣಾ ಸಮಿತಿಯ ವರದಿಯ ಶಿಫಾರಸ್ಸನ್ನು ಅನುಮೋದಿಸಿತು |
| 5. | ಶ್ರೀ ಕಲ್ಪವೃಕ್ಷ ಪದವಿ ಕಾಲೇಜು, ಹೆಸರುಘಟ್ಟ ಮುಖ್ಯರಸ್ತೆ, ಬೆಂಗಳೂರು (ವರದಿ ದಿನಾಂಕ: 22-07-2022) | 2021-22 ಮತ್ತು 2022-23ನೇ ಸಾಲಿನ ಸಂಯೋಜನಾ ನವೀಕರಣಕ್ಕೆ ಶಿಫಾರಸ್ಸು ಮಾಡಲಾಗಿದೆ (65.37) (ಬಿ.ಕಾಂ.) | ಸಂಬಂಧಪಟ್ಟ ಸ್ಥಳೀಯ ವಿಚಾರಣಾ ಸಮಿತಿಯ ವರದಿಯ ಶಿಫಾರಸ್ಸನ್ನು ಅನುಮೋದಿಸಿತು |
| 6. | ಬಿ.ಟಿ.ಎಲ್. ಕಾಲೇಜ್ ಆಫ್ ಎಜುಕೇಷನ್, ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾ, ಹೊಸೂರು ರಸ್ತೆ, ಬೆಂಗಳೂರು (ವರದಿ ದಿನಾಂಕ: 08-09-222) | ಬಿ.ಇಡಿ.-100, ಸಂಯೋಜನಾ ನವೀಕರಣಕ್ಕೆ ಶಿಫಾರಸ್ಸು ಮಾಡಲಾಗಿದೆ (49.17) | ಸಂಬಂಧಪಟ್ಟ ಸ್ಥಳೀಯ ವಿಚಾರಣಾ ಸಮಿತಿಯ ವರದಿಯ ಶಿಫಾರಸ್ಸನ್ನು ಅನುಮೋದಿಸಿತು |
| (ಸುತ್ತೋಲೆ ನಿರ್ಣಯದ ಕಾರ್ಯ ಸೂಚಿ ಪತ್ರ ಸಂಖ್ಯೆ:ಎಸ್.ವೈಎನ್./ಎ1/ಸಿಂ.ಸು.ಸಭೆ/ ಸುತ್ತೋಲೆ/2022-23 ದಿನಾಂಕ: 01-09-2022 ಮೂಲಕ ಪರಿಚಲನೆಗೊಂಡ ವರದಿಗಳು) | | | |
| 7. | ಬಿ.ಜಿ.ಎಸ್. ಇನ್ಸಿಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್ಮೆಂಟ್, ಬಿಜಿಎಸ್ ನಾಲೆಡ್ಜ್ ಸಿಟಿ, ನಿತ್ಯಾನಂದನಗರ, ಕೆ. ಗೊಲ್ಲಹಳ್ಳಿ ಅಂಚೆ, ಬೆಂಗಳೂರು-560 074 (ವರದಿ ದಿನಾಂಕ: 29-08-2022) | ಬಿ.ಹೆಚ್.ಎಂ.-60, ಕೋರ್ಸಿನೊಂದಿಗೆ ಹೊಸ ಕಾಲೇಜು ಸಂಯೋಜನೆಗೆ ಶಿಫಾರಸ್ಸು ಮಾಡಲಾಗಿದೆ (58.08) | ಸಂಬಂಧಪಟ್ಟ ಸ್ಥಳೀಯ ವಿಚಾರಣಾ ಸಮಿತಿಯ ವರದಿಯ ಶಿಫಾರಸ್ಸನ್ನು ಅನುಮೋದಿಸಿತು |

| | | | |
|---|---|---|---|
| 8. | ಗ್ಲೋಬಲ್ ಇನ್ಸಿಟಿಟ್ಯೂಟ್ ಆಫ್ ಮ್ಯಾನೆಜ್ಮೆಂಟ್ ಅಂಡ್ ಸೈನ್ಸ್, ನಂ.6, 3ನೇ ಕ್ರಾಸ್, ಡಿ ರಸ್ತೆ, ಐಡಿಯಲ್ ಹೋಮ್ ಟೌನ್‌ಷಿಪ್, 2ನೇ ಫ್ಲೇಸ್, ರಾಜರಾಜೇಶ್ವರಿನಗರ, ಬೆಂಗಳೂರು-560 098 (ವರದಿ ದಿನಾಂಕ: 29-08-2022) | ಎಂ.ಬಿ.ಎ. ಮತ್ತು ಎಂ.ಸಿ.ಎ. ಕೋರ್ಸುಗಳ ವಿದ್ಯಾರ್ಥಿ ಪ್ರಮಾಣವನ್ನು ತಲಾ 60 ರಿಂದ 120ಕ್ಕೆ ಹೆಚ್ಚಿಸಲು ಶಿಫಾರಸ್ಸು ಮಾಡಲಾಗಿದೆ. (73.88) | ಸಂಬಂಧಪಟ್ಟ ಸ್ಥಳೀಯ ವಿಚಾರಣಾ ಸಮಿತಿಯ ವರದಿಯ ಶಿಫಾರಸ್ಸನ್ನು ಅನುಮೋದಿಸಿತು |

ಮುಂದುವರೆದು, ಸ್ಥಳೀಯ ವಿಚಾರಣಾ ಸಮಿತಿಗಳು ತಮ್ಮ ವರದಿಗಳನ್ನು ಶಿಫಾರಸ್ಸನ್ನು/ಅಬ್ಸರ್ವೇಷನ್ ಮಾಡಿರುವಂತೆ ಶಿಕ್ಷಕರ ನೇಮಕಾತಿಯಲ್ಲಿ ರೋಸ್ಟರ್ ಅನುಸರಿಸಿ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಶಿಕ್ಷಕರನ್ನು ನೇಮಕಾತಿ ಮಾಡಬೇಕೆಂದು ಒಂದು ಸುತ್ತೋಲೆಯನ್ನು ಸಂಯೋಜಿತ ಕಾಲೇಜುಗಳಿಗೆ ಕಳುಹಿಸಿಕೊಡಬೇಕೆಂದು ನಿರ್ಣಯಿಸಿತು.



**Item No. 07: Nomination of three experts in the subject and / or allied subjects to the faculty of Arts Bangalore University, Bangalore for re-constitution of the Faculty-reg.**

**Resolution:**

After detailed discussions, the Syndicate resolved to nominate the following subject experts on Faculty of Arts of Bangalore University for a period of two years.

1. Prof. Nayakwadi, Professor, Department of History, Manasa Gangothri, Mysore University, Mysuru-570 005.
2. Dr. Susheela, Professor, Department of Studies in Kannada & Translation, Dravida Unviersity, Kuppam, Chittoor, Andhra Pradesh-517426
3. Dr. K. B. Rangappa, Professor, Department of Economics, Davanagere University, SH 76, Tholahunase, Davanagere-577002.

*Proceedings of the Special meeting of the Syndicate held on 13.09.2022*

**Item No. 08: Celebration of Engineers Day on 15th September 2022 and inauguration of University of Visvesvaraya College of Engineering, K.R. Circle, Bangalore.**

The Vice-Chancellor informed the Syndicate that the Hon'ble Chief Minister will inaugurate the Visvesvaraya College of Engineering University on 15th September 2022 at a function arranged to celebrate the Engineers Day at UVCE premises at K.R. Circle. In this connection, the Hon'ble Minister for Higher Education and the Principal Secretary, Higher Education have directed the Bangalore University to make

necessary arrangements for the Engineers Day Celebration Programme. The expenditure for the proposed programme would be around 4.97 Lakhs. The expenditure will be reimbursed by the UVCE University later. Therefore, the Syndicate approval is needed to make the necessary arrangements.

***Resolution:***

After detailed discussion, the Syndicate resolved to approve for incurring the expenditure of Rs.4,97,000/- (Rupees Four lakhs ninety seven thousand) towards organizing the Engineers Day on 15th September 2022 at UVCE. Further, the concerned organisers of the programme shall be instructed to invite all the members of the Syndicate to the programme.

***Proceedings of the Special meeting of the Syndicate held on 13.09.2022***

**Item No. 09: Appointment of Legal Advisor to Bangalore University.**

***Resolution:***

After detailed discussion, the Syndicate resolved to consider the panel of names of retired District Judges furnished by the Registrar General, High Court of Karnataka vide letter No.R.O.C.GOB(I) 9/2022 dated: 09-09-2022 and resolved to appoint Sri. K. Subramanya, Retired District Judge, No.166, 6th Cross, Navilu Road, Kuvempu nagar, Mysuru-570023 as the Legal Advisor of the Bangalore Univesity for a period of two years with an honorarium of Rs.85,000/- + Coneyance of Rs.15,000/- per month.

Further, the Legal Advisor has to take action to prepare the panel of Advocates and to submit the same for approval of the Syndicate.

**Item No. 10: Issues raised by the members.**

10 (1) ಡಾ. ಸಿ.ಆರ್. ಮಹೇಶ್ ಅವರು ಮಾತನಾಡಿ, ಮೈಸೂರು ವಿಶ್ವವಿದ್ಯಾಲಯವು ಸ್ಕೂಲ್ ಆಫ್ ಇಂಜಿನಿಯರಿಂಗ್ ಪ್ರಾರಂಭಿಸಿದ್ದು, ಅದೇ ಮಾದರಿಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯವು ಸ್ಕೂಲ್ ಆಫ್

ಇಂಜಿನಿಯರಿಂಗ್ ಪ್ರಾರಂಭಿಸಲು ಹಾಗೂ ಬೇಡಿಕೆ ಇರುವ ಹೊಸ ಕೋರ್ಸುಗಳನ್ನು ಮುಂದಿನ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಬೇಕೆಂದು ಸಲಹೆ ನೀಡಿದರು.

ಡಾ. ಸುಧಾಕರ ಹೆಚ್ ಅವರು ಮಾತನಾಡಿ, ಯು.ವಿ.ಸಿ.ಇ. ಅನ್ನು ಪ್ರತ್ಯೇಕ ವಿಶ್ವವಿದ್ಯಾಲಯವನ್ನಾಗಿ ಮಾರ್ಪಡಿಸಿರುವುದರಿಂದ ಬೆಂಗಳೂರು ವಿಶ್ವವಿದ್ಯಾಲಯದಿಂದ ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ ಸೇರಿ ಹೊಸ ಬಿ.ಟೆಕ್. ಕೋರ್ಸುಗಳಾದ ಆರ್ಟಿಫ್ಷಿಷಿಯಲ್ ಇಂಟಿಲೆಜೆನ್ಸ್, . ಮೆಷೀನ್ ಲರ್ನಿಂಗ್, ಇಂಟರ್‌ನೆಟ್ ಆಫ್ ಥಿಂಗ್ಸ್, ಮುಂತಾದವುಗಳನ್ನು ಪ್ರಾರಂಭಿಸಿ ವಿಶ್ವವಿದ್ಯಾಲಯದಲ್ಲಿ ಇರುವ ಮೂಲ ಸೌಕರ್ಯಗಳನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕೆಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಯು.ವಿ.ಸಿ.ಇ.ಯು ಪ್ರತ್ಯೇಕ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿರುವ ಕಾರಣ ಮುಂದಿನ ಶೈಕ್ಷಣಿಕ ಸಾಲಿನಿಂದ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್, ಎಲೆಕ್ಟ್ರಾನಿಕ್ ಇಂಜಿನಿಯರಿಂಗ್ ಕೋರ್ಸುಗಳ ಜೊತೆ ಬೇಡಿಕೆ ಇರುವ ಇಂಜಿನಿಯರಿಂಗ್ ಕೋರ್ಸುಗಳನ್ನು ಪ್ರಾರಂಭಿಸಲು ಹಾಗೂ ಈ ಕೋರ್ಸುಗಳನ್ನು ಪ್ರಾರಂಭಿಸುವ ಬಗ್ಗೆ ಪೂರ್ವ ಸಿದ್ಧತೆ ಮಾಡಿಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

10 (2) ಕುಲಸಚಿವರು ಮಾತನಾಡಿ, ಡಾ. ಸುಧಾಕರ ಹೆಚ್ ಅವರು ಪತ್ರವನ್ನು ನೀಡಿದ್ದು, ಆ ಪತ್ರದಲ್ಲಿ, ಬೆಂಗಳೂರು ವಿಶ್ವವಿದ್ಯಾಲಯದ ಮುಖ್ಯ ದ್ವಾರದಲ್ಲಿ ನಿರ್ಮಿಸಿರುವ ಮೆಟ್ರೋ ನಿಲ್ದಾಣಕ್ಕೆ "ಡಾ. ಹೆಚ್. ನರಸಿಂಹಯ್ಯ ಜ್ಞಾನಭಾರತಿ ಮೆಟ್ರೊ ನಿಲ್ದಾಣ" ಎಂದು ಹೆಸರಿಡಲು ನಿರ್ಣಯ ತೆಗೆದುಕೊಂಡು ಸಂಬಂಧಪಟ್ಟ ಬಿ.ಎಂ.ಆರ್.ಸಿ.ಎಲ್. ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲು ಕೋರಿರುತ್ತಾರೆ ಎಂದು ತಿಳಿಸಿ, ಸದರಿ ಪತ್ರವನ್ನು ಸಿಂಡಿಕೇಟ್ ಮುಂದೆ ಮಂಡಿಸಿದರು.

**ನಿರ್ಣಯ:**

ದೀರ್ಘ ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಕ್ಯಾಂಪಸ್‌ನ ನಿರ್ಮಾಣಕ್ಕೆ ಕಾರಣಕರ್ತರಾದ ಡಾ. ಹೆಚ್. ನರಸಿಂಹಯ್ಯ ಅವರ ಜ್ಞಾಪಕಾರ್ಥವಾಗಿ, ವಿಶ್ವವಿದ್ಯಾಲಯದ ಮುಖ್ಯ ದ್ವಾರದಲ್ಲಿ ನಿರ್ಮಿಸಿರುವ ಮೆಟ್ರೋ ನಿಲ್ದಾಣಕ್ಕೆ "ಡಾ. ಹೆಚ್. ನರಸಿಂಹಯ್ಯ ಜ್ಞಾನಭಾರತಿ ಮೆಟ್ರೊ ನಿಲ್ದಾಣ" ಎಂದು ಹೆಸರಿಡಲು ಬಿ.ಎಂ.ಆರ್.ಸಿ.ಎಲ್. ಪ್ರಾಧಿಕಾರಕ್ಕೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪತ್ರ ಬರೆಯಲು ಸಿಂಡಿಕೇಟ್ ನಿರ್ಣಯಿಸಿತು.

10 (3) ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ಡಾ. ಹೆಚ್. ನರಸಿಂಹಯ್ಯ ಅವರ ಪ್ರತಿಮೆಯನ್ನು ಜ್ಞಾನಭಾರತಿ ಆವರಣದ ಸೂಕ್ತ ಸ್ಥಳದಲ್ಲಿ ಸ್ಥಾಪಿಸಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

ಪ್ರೊ. ವಿ.ವಿ. ಸುರೇಶ್ ಬಾಬು ಅವರು ಮಾತನಾಡಿ, ಸೆಂಟ್ರಲ್ ಕಾಲೇಜು ಆವರಣದಲ್ಲಿರುವ ಸೆನೆಟ್ ಭವನದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ ಕಾರ್ಯ ನಿರ್ವಹಿಸಿದ ಹಿಂದಿನ ಕುಲಪತಿಗಳ ಭಾವಚಿತ್ರಗಳನ್ನು ಹಾಕಲಾಗಿತ್ತು. ಪ್ರಸ್ತುತ ಸೆಂಟ್ರಲ್ ಕಾಲೇಜಿನ ಸೆನೆಟ್ ಭವನವು ಬೆಂಗಳೂರು ನಗರ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟಿರುವುದರಿಂದ, ವಿಶ್ವವಿದ್ಯಾಲಯದ ಡಾ. ಹೆಚ್.ಎನ್. ಸಭಾಂಗಣದಲ್ಲಿ ಹಿಂದಿನ ಕುಲಪತಿಗಳ ಭಾವಚಿತ್ರಗಳನ್ನು ಹಾಕಬೇಕೆಂದು ಕೋರಿದರು.

ಕುಲಪತಿಗಳು ಉತ್ತರಿಸಿ ಡಾ. ಹೆಚ್. ನರಸಿಂಹಯ್ಯನವರ ಪುತ್ಥಳಿಯನ್ನು ಡಾ. ಹೆಚ್.ಎನ್. ಸಭಾಂಗಣದ ಆವರಣದ ವರಂಡಾದಲ್ಲಿ ಸ್ಥಾಪಿಸಬಹುದಾಗಿದೆ ಹಾಗೂ ಹಿಂದಿನ ಕುಲಪತಿಗಳ ಭಾವಚಿತ್ರಗಳನ್ನು ಡಾ. ಹೆಚ್.ಎನ್. ಸಭಾಂಗಣ ಅಥವಾ ಸೆನೆಟ್ ಹಾಲ್‌ನಲ್ಲಿ ಹಾಕಲು ಸೂಚಿಸುವುದಾಗಿ ತಿಳಿಸಿದರು.

10 (4) ಸಿಂಡಿಕೇಟ್ ಸದಸ್ಯರಾಗಿ ಕಾರ್ಯನಿರ್ವಹಿಸಿ ನಿರ್ಗಮಿಸಿದ ಸದಸ್ಯರನ್ನು ಅವರು ಹಾಜರಾಗುವ ಕೊನೆಯ ಸಿಂಡಿಕೇಟ್ ಸಭೆಯಲ್ಲಿ ಸನ್ಮಾನಿಸಬೇಕೆಂದು ಸಿಂಡಿಕೇಟ್ ಸೂಚಿಸಿತು.

## GENERAL DISCUSSION:

1. ಡಾ. ಸುಧಾಕರ ಹೆಚ್. ಅವರು ಮಾತನಾಡಿ, ಸಿಂಡಿಕೇಟ್ ಸಭೆಯಲ್ಲಿ ಸದಸ್ಯರುಗಳು ವ್ಯಕ್ತಪಡಿಸುವ ಸಲಹೆ ಸೂಚನೆ/ಆಕ್ಷೇಪಣೆಗಳನ್ನು ಯಥಾವತ್ತಾಗಿ ದಾಖಲಿಸಬೇಕೆಂದು ತಿಳಿಸಿದರು.

   ಕುಲಪತಿಗಳು ಮಾತನಾಡಿ ಈ ಬಗ್ಗೆ ಸೂಕ್ತ ಕ್ರಮವಹಿಸುವುದಾಗಿ ತಿಳಿಸಿದರು.

2. ಶ್ರೀ ಉದಯಕುಮಾರ್ ಎಂ ಅವರು ಮಾತನಾಡಿ, ದಿನಾಂಕ: 17–08–2022ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕಳೆದ 20 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರನ್ನು ಖಾಯಂ ಮಾಡುವ ಬಗ್ಗೆ ವರದಿ ಸಲ್ಲಿಸಲು ಸಿಂಡಿಕೇಟ್ ಒಂದು ಸಮಿತಿಯನ್ನು ರಚಿಸಲು ನಿರ್ಣಯಿಸಿತ್ತು. ಆದರೆ, ಇಲ್ಲಿಯವರೆಗೂ ಸಮಿತಿಯ ರಚನೆಯ ಬಗ್ಗೆ ಅಧಿಸೂಚನೆಯನ್ನು ಹೊರಡಿಸಿರುವುದಿಲ್ಲವೆಂದು ತಿಳಿಸಿ ವಿಷಾದ ವ್ಯಕ್ತಪಡಿಸಿದರು. ಈಗಾಗಲೇ ಮಾನ್ಯ ಉಚ್ಚನ್ಯಾಯಾಲಯವು ನೀಡಿದ್ದ ಗಡುವು ಮುಗಿದಿರುತ್ತದೆ. ಸಿಂಡಿಕೇಟ್‌ಗೆ ಮಾಹಿತಿ ಇಲ್ಲದೆ ಸರ್ಕಾರಕ್ಕೆ ಕೂಡ ಪತ್ರ ಬರೆಯಲಾಗಿದೆ. ದಿನಗೂಲಿ ನೌಕರರು ಕಳೆದ 25 ರಿಂದ 30 ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದು, ಇನ್ನು ನಾಲ್ಕೈದು ವರ್ಷಗಳಲ್ಲಿ ನಿವೃತ್ತಿ ಹೊಂದಲಿದ್ದಾರೆ. ಈಗಾಲೇ ಅವರಿಗೆ ಮೂಲ ವೇತನ ಹಾಗೂ ನಿಗದಿಪಡಿಸಿರುವ ತುಟ್ಟಿಭತ್ಯೆ ಮತ್ತು ಮನೆ ಬಾಡಿಗೆ ಭತ್ಯೆಯಲ್ಲಿ ಶೇ75ರಷ್ಟನ್ನು ನೀಡಲಾಗುತ್ತಿದೆ. ಅವರ ಸೇವೆಯನ್ನು ಖಾಯಂಗೊಳಿಸಿದರೆ, ಪ್ರತಿಯೊಬ್ಬರಿಗೆ ಗರಿಷ್ಠ ರೂ.2,000 ರಿಂದ ರೂ.3,000/–ವರೆಗೆ ವೇತನ ವ್ಯತ್ಯಾಸವಾಗುತ್ತದೆ. ಆದ್ದರಿಂದ ಈ ಕೆಳವರ್ಗದ ನೌಕರರಿಗೆ ಭದ್ರತೆ ಒದಗಿಸಲು ಅರ್ಹರನ್ನು ಖಾಯಂಗೊಳಿಸಲು ವರದಿ ನೀಡಲು ಮೂರು ದಿನಗಳ ಒಳಗಾಗಿ ಸಿಂಡಿಕೇಟ್ ನಿರ್ಣಯದಂತೆ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಲು ಆಗ್ರಹಿಸಿದರು.

ಡಾ. ಸುಧಾಕರ ಹೆಚ್ ಅವರು ಮಾತನಾಡಿ, ನಿಯಮ ಮೀರಿ 89 ಜನ ಸಿಬ್ಬಂದಿಯನ್ನು ಗ್ರೂಪ್ 'ಡಿ' ಯಿಂದ ಗ್ರೂಪ್ 'ಸಿ' ಎಂದು ಪರಿಗಣಿಸಲಾಗಿದೆ. ಎಲ್ಲಾ ಶಿಕ್ಷಕರಿಗೆ ಸಿ.ಎ.ಎಸ್. ಅಡಿಯಲ್ಲಿ ಮುಂಬಡ್ತಿಯನ್ನು ನೀಡಲಾಗಿದೆ. ಆ ಹಂತದಲ್ಲಿ ಇರದ ತೊಂದರೆಯನ್ನು ಈಗ ವ್ಯಕ್ತಪಡಿಸಿರುವುದು ಸಮಂಜಸವಲ್ಲ, ನ್ಯಾಯಾಲಯದ ಆದೇಶಾನುಸಾರ ಖಾಯಮಾತಿ ಮಾಡಲು ಕ್ರಮ ಕೈಗೊಳ್ಳಬೇಕು. ಸಿಂಡಿಕೇಟ್ ರಚಿಸಿರುವ ಸಮಿತಿಯಲ್ಲಿ ಸರ್ಕಾರದ ಉಪಕಾರ್ಯದರ್ಶಿಯವರ ಬದಲಾಗಿ, ಕಾನೂನು ಸಲಹೆಗಾರರು, ಪ್ರೊ. ಸುರೇಶ್ ನಾಡಗೌಡರ್ ಅಥವಾ ಪ್ರೊ. ವಿ. ಸುದೇಶ್ ಅವರನ್ನು ಸೇರ್ಪಡೆಗೊಳಿಸಿ ಸಮಿತಿಯನ್ನು ರಚಿಸಬೇಕೆಂದು ತಿಳಿಸಿದರು.

ಪ್ರೊ. ಟಿ.ವಿ. ರಾಜು ಅವರು ಮಾತನಾಡಿ ನ್ಯಾಯಾಲಯದ ಆದೇಶ ಸ್ಪಷ್ಟವಾಗಿದೆ, ಅದರಂತೆ ಕ್ರಮ ಕೈಗೊಳ್ಳಿ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಈಗಗಾಲೆ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ, ಹಿಂದಿನ ಸಿಂಡಿಕೇಟ್ ನಿರ್ಣಯದಂತೆ ಸಮಿತಿಯ ರಚನೆಯ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.

3. ಡಾ. ಸುಧಾಕರ ಹೆಚ್ ಅವರು ಮಾತನಾಡಿ, ಶ್ರೀ ದ್ಯಾವಪ್ಪ ಎಂಬುವವರು ಆರ್ಕಿಟೆಕ್ಚರ್ ವಿಭಾಗದ ಸಹಾಯಕ ಪ್ರಾಧ್ಯಾಪಕರ ಬ್ಯಾಕ್‌ಲಾಗ್ ಹುದ್ದೆಗೆ ಅರ್ಜಿ ಸಲ್ಲಿಸಿದ್ದು, ಸದರಿ ವಿಭಾಗಕ್ಕೆ ಅರ್ಜಿ ಕರೆದಿದ್ದ ಪರಿಶಿಷ್ಠ ಜಾತಿ-ಮಹಿಳಾ ಮೀಸಲಾತಿಯ ಹುದ್ದೆಗೆ ಯಾವುದೇ ಅಭ್ಯರ್ಥಿ ಅರ್ಜಿ ಸಲ್ಲಿಸದ ಕಾರಣ ಆ ಹುದ್ದೆಯ ಎದುರಾಗಿ ಶ್ರೀ ದ್ಯಾವಪ್ಪ ಅವರ ಅರ್ಜಿಯನ್ನು ಪರಿಗಣಿಸಲಾಗಿರುವುದಿಲ್ಲ. ಆದಕಾರಣ ಶ್ರೀ ದ್ಯಾವಪ್ಪ ಅವರನ್ನು ಸದರಿ ಹುದ್ದೆಗೆ ಪರಿಗಣಿಸುವಂತೆ ಮಾನ್ಯ ಉಚ್ಚ ನ್ಯಾಯಾಲಯದಿಂದ ಆದೇಶ ಪಡೆದಿರುತ್ತಾರೆ. ಆದರೆ, ಸಿಂಡಿಕೇಟ್ ಅನುಮೋದನೆ ಇಲ್ಲದೆ ವಿಶ್ವವಿದ್ಯಾಲಯದ ಆಡಳಿತ ವರ್ಗವು ಮೇಲ್ಮನವಿ ಸಲ್ಲಿಸಿರುವುದಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿ, ಶ್ರೀ ದ್ಯಾವಪ್ಪ ಅವರನ್ನು ಆ ಹುದ್ದೆಗೆ ನೇಮಕ ಮಾಡಬೇಕೆಂದು ಆಗ್ರಹಿಸಿದರು.

ಪ್ರೊ. ಟಿ.ವಿ. ರಾಜು ಅವರು ಮಾತನಾಡಿ ಈ ಬಗ್ಗೆ ಕಾನೂನು ಅಭಿಪ್ರಾಯಪಡೆದು ಕ್ರಮ ವಹಿಸಲು ಕೋರಿದರು.

ಕುಲಪತಿಗಳು ಮಾತನಾಡಿ, ಈ ಬಗ್ಗೆ ಪರಿಶೀಲಿಸುವುದಾಗಿ ತಿಳಿಸಿದರು.

4. ಪ್ರೊ. ವಿ.ವಿ. ಸುರೇಶ್ ಬಾಬು ಅವರು ಮಾತನಾಡಿ ಬಹಳ ವರ್ಷಗಳ ಹಿಂದೆ ಸಂಯೋಜಿತ ಕಾಲೇಜುಗಳ ಬಾವುಟಗಳನ್ನು ವಿಶ್ವವಿದ್ಯಾಲಯದಲ್ಲಿ ಪ್ರದರ್ಶಿಸಲಾಗಿತ್ತು. ಅದೇ ರೀತಿ ಕ್ರಮವಹಿಸಲು ಕೋರಿದರು.

ಶ್ರೀ ಗೋಪಿನಾಥ್ ಅವರು ಮಾತನಾಡಿ ಇದು ಒಳ್ಳೆಯ ಸಲಹೆ, ವಿಶ್ವವಿದ್ಯಾಲಯ ಮಟ್ಟದ ಅಂತರ್ ಕಾಲೇಜು ಮಟ್ಟದ ಕ್ರೀಡಾಕೂಟ, ಉದ್ಯೋಗಮೇಳ, ಸಾಂಸ್ಕೃತಿಕ ಸ್ಪರ್ಧೆಗಳ ಸಂದರ್ಭಗಳಲ್ಲಿ

ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳ ಬಾವುಟಗಳನ್ನು ಸೂಕ್ತ ಸ್ಥಳಗಳಲ್ಲಿ ಪ್ರದರ್ಶಿಸಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

5. ಡಾ. ಸಿ.ಆರ್. ಮಹೇಶ್ ಅವರು ಮಾತನಾಡಿ, ಪ್ರತಿ ಅಧ್ಯಯನ ವಿಭಾಗವು ಅವರ ವಿಷಯದಲ್ಲಿ ನುರಿತ ಶಿಕ್ಷಣ ತಜ್ಞರು ಹಾಗೂ ಕೈಗಾರಿಕಾ ಕ್ಷೇತ್ರದ ಪರಿಣಿತರುಗಳನ್ನು ಆಹ್ವಾನಿಸಿ ವಿಶೇಷ ಉಪನ್ಯಾಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅಧ್ಯಯನ ವಿಭಾಗಗಳ ಮುಖಸ್ಥರುಗಳಿಗೆ ಸೂಚಿಸಬೇಕೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ ವಿಶ್ವವಿದ್ಯಾಲಯದ ಅಭಿವೃದ್ಧಿಯ ಬಗ್ಗೆ ಚರ್ಚಿಸಲು ಪ್ರತ್ಯೇಕ ಸಿಂಡಿಕೇಟ್ ಸಭೆಯನ್ನು ಸಧ್ಯದಲ್ಲೇ ಕರೆಯುವುದಾಗಿ ತಿಳಿಸಿ, ಅಲ್ಪಾವಧಿ ಹಾಗೂ ದೀರ್ಘಾವಧಿಯ ಯೋಜನೆಗಳನ್ನು ರೂಪಿಸಲು ಸದಸ್ಯರುಗಳು ಸಲಹೆಗಳನ್ನು ನೀಡಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಇನ್ಫೋಸಿಸ್ ಸಂಸ್ಥೆಯೊಂದಿಗೆ (Spring Board) ಅಲ್ಪಾವಧಿ ಹಾಗೂ ದೀರ್ಘಾವಧಿ ಔದ್ಯೋಗಿಕ ಕೋರ್ಸುಗಳನ್ನು ನಡೆಸುವ ಬಗ್ಗೆ ಒಡಂಬಡಿಕೆ ಮಾಡಿಕೊಂಡಿರುವುದಾಗಿ ತಿಳಿಸಿದರು. ಅವರು ಮುಂದುವರೆದು, ಬೆಂಗಳೂರು ವಿಶ್ವವಿದ್ಯಾಲಯಕ್ಕೆ 2020–21ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ರಾಜ್ಯದ ಅತ್ಯುತ್ತಮ ವಿಶ್ವವಿದ್ಯಾಲಯದ ಪ್ರಶಸ್ತಿ ಬಂದಿರುತ್ತದೆ ಎಂದು ಸಿಂಡಿಕೇಟ್ ಗಮನಕ್ಕೆ ತಂದರು. ಸದರಿ ಕಾರ್ಯಕ್ಕೆ ಶ್ರಮಿಸಿದ ಸಿಬ್ಬಂದಿ, ಅಧಿಕಾರಿಗಳನ್ನು ಹಾಗೂ ಆಡಳಿತವನ್ನು ಸಿಂಡಿಕೇಟ್ ಶ್ಲಾಘಿಸಿ ಅಭಿನಂದಿಸಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

**ಕುಲಪತಿಯವರು**